Over 20 Years of Celebrating the Arts

India Foundation for the Arts

I F A



ಕಲಿ-ಕಲಿಸು

AN ARTS EDUCATION TEACHER INITIATIVE

KALI-KALISU

# ಹೆಜ್ಜೆಗಳು

## ಸರ್ಕಾರಿ ಶಾಲೆಗಳಲ್ಲಿ ಕಲಾ ಅಂತರ್ಗತ ಪ್ರಯೋಗಗಳು

**2017–18**

*This publication is supported by the Singhal Iyer Family Foundation (SIFF)*

**www.siff.in**



ಕಲಿ–ಕಲಿಸು

AN ARTS EDUCATION TEACHER INITIATIVE

KALI-KALISU

# ಹೆಜ್ಜೆಗಳು

## ಸರ್ಕಾರಿ ಶಾಲೆಗಳಲ್ಲಿ ಕಲಾ ಅಂತರ್ಗತ ಪ್ರಯೋಗಗಳು

## 2017–18

Over 20 Years of Celebrating the Arts

I F A

India Foundation for the Arts

**Kali Kalisu - Hejjegalu**:
A snapshot of our arts integrated interventions in
Government Schools of Karnataka during 2017-18
Complied by; Nagara M Hudeda and Chitra Venkataraju

India Foundation for the Arts
'Apurva' Ground Floor, No 259, 4th Cross,
Raj Mahal Vilas 2nd Stage, 2nd Block, Bangalore
India - 560 094
Tel: 91-80-2341 4681 / 82 / 83

**ಸಂಪಾದಕರು** : ನಾಗರಾಜ್ ಎಂ. ಹುಡೇದ
ಮತ್ತು ಚಿತ್ರ ವೆಂಕಟರಾಜು
**ಪ್ರಥಮ ಮುದ್ರಣ** : 2019
**ಹಕ್ಕುಗಳು** : ಐಎಫ್ಎ, ಬೆಂಗಳೂರು
**ಪುಟಗಳು** : 64
**ಆಕಾರ** : 1/8 ಡೆಮಿ
**ಕಾಗದ** : 100 ಜಿಎಸ್ಎಂ ಆರ್ಟ್‌ಬೋರ್ಡ್
**ಪುಸ್ತಕ ವಿನ್ಯಾಸ** : ಎಸ್. ಕಲಾಧರ್
**ಮುದ್ರಣ** : ಲಕ್ಷ್ಮೀ ಮುದ್ರಣಾಲಯ
117/2, 5ನೇ ಮುಖ್ಯರಸ್ತೆ,
ಚಾಮರಾಜಪೇಟೆ
ಬೆಂಗಳೂರು – 560018
ದೂ : 080 26613123,
26618752

# ಪರಿವಿಡಿ


## ಶುಭ ಸಂದೇಶ

06 ಅರುಂಧತಿ ಘೋಷ್
08 ಕೃಷ್ಣಮೂರ್ತಿ ಟಿ.ಎನ್.

## ಸಂಪಾದಕೀಯ

10 ನಾಗರಾಜ್ ಎಂ. ಹುಡೇದ
ಚಿತ್ರಾ ವೆಂಕಟರಾಜು

## ಶಿಕ್ಷಕರ ಯೋಜನೆಗಳು

12 ಜಲಜಾಕ್ಷಿ ಕೆ.ಡಿ.
14 ಬೇಬಿ ಬಿರಾದಾರ
16 ಗಂಗಪ್ಪ ಎಸ್. ಎಲ್.
18 ಗೀತಾ ಕೆ.ಎಚ್.
20 ಗುಂಡುರಾವ್ ದೇಸಾಯಿ
22 ರವಿಚಂದ್ರ ಡಿ.
24 ಕೊಟ್ರೇಶ ಬಿ.
26 ದಂಡಪ್ಪಗೌಡ ಐ. ಪಾಟೀಲ

## ಕಲಾವಿದರ ಯೋಜನೆಗಳು

28 ರಾಮಗಿರಿ ಪೋಲೀಸ್ ಪಾಟೀಲ್
30 ಸಂಕಣ್ಣವರ ಶಂಕ್ರಪ್ಪ ರಾಮಪ್ಪ
32 ಪ್ರವೀಣ
34 ಮೀತಾ ಜೈನ್
36 ಚಂದ್ರಪ್ಪ ಸೊಬತಿ
38 ಮೋಹನ್ ಕುಮಾರ್
40 ಸವಿತಾ ಉದಯ್

## ಸಂಸ್ಥಾ ಯೋಜನೆಗಳು

42 ಹೊಂಗಿರಣ ವಿದ್ಯಾಸಂಸ್ಥೆ
44 ನಳಂದಾ ವಿದ್ಯಾಪೀಠ

## ಯಶೋಗಾಥೆಗಳು

46 ಪ್ರಜ್ಞಾ ಹೆಗಡೆ
48 ಶಿವನಾಯಕ ದೊರೆ
50 ವೆಂಕಟೇಶ ಜಿ. ನಾಯ್ಕ
52 ಗುಂಡಪ್ಪ ಗೌಡಗೋಳ
54 ಶಾಂತಾಮಣಿ

## ಇತರೆ

56 ಕಲಾ ತರಬೇತಿಗಳು
62 ಯೋಜನೆಗಳ ಆಹ್ವಾನ

ಶುಭ ಸಂದೇಶ

**ಅರುಂಧತಿ ಘೋಷ್**
ಮುಖ್ಯಸ್ಥರು
ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್
ಬೆಂಗಳೂರು



ನಾನು ನನ್ನ ಕನಸುಗಳನ್ನು ಹೊತ್ತು 1996 ರಲ್ಲಿ ಬೆಂಗಳೂರಿಗೆ ಬಂದೆ. ಹಾಗೆಯೇ ನಿಧಾನವಾಗಿ ವರುಷಗಳು ಕಳೆದವು, ಇಲ್ಲಿಯ ಸಾಂಸ್ಕೃತಿಕ ಶ್ರೀಮಂತಿಕೆ ಮತ್ತು ಕಲಾ ವೈವಿಧ್ಯತೆಯನ್ನು ಕಂಡುಕೊಂಡೆ. ಕಲೆಯ ಆಸಕ್ತಿಯನ್ನು ಬೆಳೆಸಿತು. ಆ ಮೂಲಕ ಬೆಂಗಳೂರು ನಗರ ಅಷ್ಟೇ ಅಲ್ಲದೆ ಕರ್ನಾಟಕದಾದ್ಯಂತ ನನ್ನ ಸ್ನೇಹ, ಸಂಪರ್ಕ ಬೆಳೆಯಿತು. ಕನ್ನಡದ ಪ್ರಮುಖ ಸಾಹಿತಿಗಳಾದ ರಾಷ್ಟ್ರಕವಿ ಕುವೆಂಪು, ಶಿವರಾಮ ಕಾರಂತ, ಶಿವಶರಣೆ ಅಕ್ಕಮಹಾದೇವಿ ಮತ್ತು ವೈದೇಹಿಯವರ ಬರಹಗಳು ನನ್ನ ಮೇಲೆ ಸಾಕಷ್ಟು ಪ್ರಭಾವ ಬೀರಿವೆ. ಇವರೆಲ್ಲರ ಸಾಹಿತ್ಯದ ಬರಹಗಳು ನಾನು ಇಲ್ಲಿ ಬೇರೂರಿ ಬೆಳೆಯಲಿಕ್ಕೆ ಕಾರಣವಾಗಿವೆ. ನಾನೂ ಸಹಿತ ಕರ್ನಾಟಕದವಳಾಗಿರುವುದಕ್ಕೆ ನನಗೆ ಹೆಮ್ಮೆಯೆನಿಸುತ್ತದೆ. ಇಲ್ಲಿಯ ಸಮುದಾಯವೂ ಸಹಿತ ನನ್ನ ಅಪ್ಪಿಕೊಂಡಿದೆ ಹಾಗೂ ಒಪ್ಪಿಕೊಂಡಿದೆ.

ಕಲೆ ಮತ್ತು ಸಂಸ್ಕೃತಿಗಳು ನಮ್ಮೆಲ್ಲರಲ್ಲೂ ರಕ್ತಗತವಾಗಿವೆ. ಅವುಗಳನ್ನು ಪರಿಶೋಧಿಸಿ ನಮ್ಮನ್ನೆಲ್ಲ ಬೆಸೆಯುವಂತೆ ಮಾಡುತ್ತಿವೆ. ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್ ನ ಬಹುಮುಖ್ಯವಾದ ಅಂಗ "ಕಲಿ–ಕಲಿಸು". ನಮ್ಮ ಮಕ್ಕಳ ಶಾಲಾ ಶಿಕ್ಷಣದಲ್ಲಿ ತಮ್ಮ ಸ್ಥಳೀಯ ಕಲೆಗಳನ್ನೂ ಕಲಿಯುವ ಮೂಲಕ ಅವುಗಳ ಇರುವಿಕೆ, ಮಹತ್ವವನ್ನು ತಮ್ಮದೇ ಧ್ವನಿಯಲ್ಲಿ ಹೆಮ್ಮೆಯಿಂದ ಸಾರುವಂತೆ ಮಾಡುತ್ತಿದೆ. ಒಂದು ಚಿಕ್ಕ ಸಮುದಾಯವು ತಾವು ಹೊಂದಿರುವ ಕಲಾ ಶ್ರೀಮಂತಿಕೆಯನ್ನು ಹೊರಜಗತ್ತಿಗೆ ಪರಿಚಯಿಸಲು ನಮ್ಮ 'ಕಲಿ–ಕಲಿಸು' ಸಹಾಯ ಮಾಡುತ್ತಿರುವುದು ಹೆಮ್ಮೆಯ ವಿಷಯ. ಭವಿಷ್ಯತ್ತಿನ ನಾಗರಿಕರಾದ ನಮ್ಮ ಮಕ್ಕಳು ಪ್ರಶ್ನಿಸುವ, ವಿಮರ್ಶಿಸುವ ಮತ್ತು ಸ್ವಂತಿಕೆಯನ್ನು ಉಳಿಸಿಕೊಂಡು ಬದುಕುವಂತಾಗಬೇಕೆಂಬುದು ನಮ್ಮ ಆಶಯವಾಗಿದೆ.

ಯೋಜನೆಗಳನ್ನು ಕೈಗೊಂಡ ಎಲ್ಲ ಶಿಕ್ಷಕರು, ಕಲಾವಿದರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನಾನು ವಿಶೇಷವಾಗಿ ಈ "ಹೆಜ್ಜೆಗಳು–2" ರ ಸಂಪಾದಕರಾದ ನಾಗರಾಜ ಎಂ. ಹುಡೇದ ಮತ್ತು ಚಿತ್ರಾ ವಿ. ಮತ್ತು ವಿನ್ಯಾಸ ಮಾಡಿರುವ ಎಸ್. ಕಲಾಧರ ಇವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ನಮ್ಮ ಕಲಾ ಶಿಕ್ಷಣ ವಿಭಾಗದ ಮುಖ್ಯಸ್ಥರಾದ ಕೃಷ್ಣಮೂರ್ತಿ ಮತ್ತು ಸಹಾಯಕರಾದ ರಾಧಿಕಾ ಭಾರಧ್ವಾಜ ಇವರನ್ನೂ ಅಭಿನಂದಿಸುತ್ತೇನೆ. ಸಾಧನೆಗೆ ಇನ್ನೊಂದು ವರುಷ ತೆರೆದಿದೆ ಮತ್ತೆ ಸನ್ನದ್ಧರಾಗೋಣ.



ಶುಭ ಸಂದೇಶ

**ಕೃಷ್ಣಮೂರ್ತಿ ಟಿ.ಎನ್.**
ಕಾರ್ಯಕ್ರಮ ನಿರ್ವಾಹಕರು,
ಕಲಾ ಶಿಕ್ಷಣ, ಐ.ಎಫ್.ಎ.
ಬೆಂಗಳೂರು



ಪ್ರಸ್ತುತ 'ಹೆಜ್ಜೆಗಳು 2017 – 2018' ನಿಮ್ಮ ಕೈಯಲ್ಲಿ ಇದೆ. ಇದು ನಮ್ಮ ವಾರ್ಷಿಕ ವರದಿಯೂ ಹೌದು ಹಾಗೆಯೇ ಕಲಿ ಕಲಿಸು ಕಾರ್ಯಕ್ರಮವನ್ನು ಶಾಲಾ ವಲಯಗಳಲ್ಲಿ ಪರಿಚಯಿಸುವ ಪ್ರಯತ್ನವೂ ಹೌದು. ಸೃಜನಶೀಲ ಮನಸುಗಳನ್ನು ಪ್ರೋತ್ಸಾಹಿಸುವುದು ನಮ್ಮ ಸಂಸ್ಥೆಯ ಉದ್ದೇಶ.

ಸ್ಥಳೀಯ ಸಂಪನ್ಮೂಲಗಳನ್ನು, ಕಲಾ ಪ್ರಕಾರಗಳನ್ನು ಮತ್ತು ಸಮುದಾಯದ ಭಾಗವಹಿಸುವಿಕೆಯನ್ನು NCF 2005, NCF 2016 ಬೆಂಬಲಿಸುತ್ತದೆ ಎಂಬುದು ತಮಗೆ ತಿಳಿದ ಸಂಗತಿಯೇ ಆಗಿದೆ. ನಮ್ಮ ಸಂಸ್ಥೆಯು ಇದನ್ನೇ ಪ್ರತಿಪಾದಿಸುತ್ತದೆ. ಇದನ್ನು ಬೋಧನಾಕ್ರಮದಲ್ಲಿ ಅಳವಡಿಸಿಕೊಳ್ಳಲು ಇಚ್ಛಿಸುವ ಶಿಕ್ಷಕ ಮತ್ತು ಕಲಾವಿದರುಗಳು ನಿಮ್ಮ ಸಂಪರ್ಕದಲ್ಲಿದ್ದರೆ ನಮ್ಮ ಸಂಸ್ಥೆಗೆ ಪರಿಚಯಿಸಿರಿ. ಅವರನ್ನು ನಮ್ಮ ಅನುದಾನದ ವ್ಯಾಪ್ತಿಯೊಳಗೆ ತರಲು ಪ್ರಯತ್ನಿಸುತ್ತೇವೆ.

'ಕಲಿ–ಕಲಿಸು' ಇಂದು ನಮ್ಮ ಸಂಸ್ಥೆಯ ಮುಖವಾಣಿಯಾಗಿ ಉಳಿದಿಲ್ಲ. ತರಬೇತಿಗಳಲ್ಲಿ ಭಾಗವಹಿಸಿದವರು, ಅನುದಾನವನ್ನು ಪಡೆದಂತವರು ಮತ್ತು ಕಾರ್ಯಕ್ರಮದ ಆಶಯಗಳನ್ನು ಒಪ್ಪಿಕೊಂಡವರು ನಮ್ಮ ಸಂಸ್ಥೆಯ ಕಾರ್ಯಕ್ರಮವನ್ನು ತಮ್ಮದು ಎಂದು ಹೇಳುವುದನ್ನು ಗಮನಿಸಿದ್ದೇನೆ. ಅಪೇಕ್ಷೆಪಟ್ಟಂತೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಪ್ರೋತ್ಸಾಹಗಳಿಂದ 'ಕಲಿ–ಕಲಿಸು' ತನ್ನ ವ್ಯಾಪ್ತಿ ಮತ್ತು ಅಸ್ತಿತ್ವವನ್ನು ಗಟ್ಟಿಯಾಗಿಸಿದೆ. ಧಾರವಾಡ ಆಕಾಶವಾಣಿ ಬಾನುಲಿ ಕೇಂದ್ರದಿಂದ ಪ್ರಸಾರವಾಗುತ್ತಿದ್ದ ಸಂದರ್ಶನ ಮಾಲಿಕೆಯು ನಮ್ಮನ್ನು ಸಮುದಾಯದತ್ತ ಕೊಂಡೊಯ್ದಿದೆ. ಒಂದೆರಡು ಜಿಲ್ಲೆಗಳನ್ನು ಹೊರತು ಪಡಿಸಿದರೆ ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಈ ಕಲಾಅಂತರ್ಗತ ಕಾರ್ಯಕ್ರಮವು ಸರಕಾರೀ ಶಾಲೆಗಳನ್ನು ತಲಪುವಂತಾಗಿದೆ.



ಈ ಯಶಸ್ಸನ್ನು ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ, ಶಾಲಾ ಶಿಕ್ಷಕರುಗಳಿಗೆ ಮತ್ತು ಕಾರ್ಯಕ್ರಮವನ್ನು ಬೆಂಬಲಿಸಿದ ಸಿಟಿ ಇಂಡಿಯಾ ಸಂಸ್ಥೆಯವರಿಗೆ ಸಲ್ಲಿಸುತ್ತೇನೆ. ಇಂದು ನೀವುಗಳು ತೋರಿದ ವಿಶ್ವಾಸವೇ ನಮ್ಮನ್ನು ರಾಷ್ಟ್ರ ಮಟ್ಟದಲ್ಲಿ ಕಾರ್ಯ ನಿರ್ವಹಿಸಲು ಪ್ರೋತ್ಸಾಹಿಸಿದೆ. ಈ ಹಿನ್ನೆಲೆಯಲ್ಲಿ ನಮ್ಮ ಕಲಿ ಕಲಿಸು ಕಾರ್ಯಕ್ರಮವನ್ನು ರಾಜಸ್ತಾನದ ಸರಕಾರಿ ಶಾಲೆಗಳಲ್ಲಿ ನಡೆಸಲು ಹೊರಟಿದ್ದೇವೆ ಎಂದು ನಿಮ್ಮಲ್ಲಿ ಹಂಚಿಕೊಳ್ಳಲು ಬಯಸುತ್ತೇನೆ.

ಕಾಲೇಜು ಹಂತದ ಶಿಕ್ಷಕನಾಗಿ ಕೇವಲ ದೃಶ್ಯ ಸಂಸ್ಕೃತಿಯನ್ನು ಪ್ರಧಾನವಾಗಿ ಗಮನಿಸುತ್ತಿದ್ದ ಅನುಭವಗಳು ಈ ನಾಲ್ಕು ವರ್ಷಗಳಲ್ಲಿ ಮತ್ತಷ್ಟು ವ್ಯಾಪ್ತಿಯನ್ನು ತೆರೆದಿಟ್ಟಿದೆ. ಭಾಷೆ– ಕಥೆ– ಜಾನಪದ– ಒಡಪು– ಗಣಿತ– ನಾಟಕ– ಗ್ರಂಥಾಲಯ – ಕೋಲಾಟ– ಕಸೂತಿ – ಹೀಗೆ ಹಲವು ಪ್ರಯೋಗಗಳು 'ನೋಡುವ' ಅರ್ಥವನ್ನೂ ಬದಲಾಯಿಸಿವೆ.

ಈ ಬದಲಾವಣೆಯ ದಾರಿಯನ್ನು ಪರಿಚಯಿಸಿದವರು , ಸರ್ಕಾರಿ ಶಾಲೆಗಳಲ್ಲಿ ನಮ್ಮ ನಿಮ್ಮಂತೆ ತಮ್ಮ ಇತಿ ಮಿತಿಯಲ್ಲಿ ಪಾಠ ಮಾಡುವ ಶಿಕ್ಷಕರು. ಅವರಿಗೆ ಹೊಳೆಯುವ ನೈಜ ಯೋಚನೆಗಳು ನನಗೇಕೆ ಪ್ರಾರಂಭದಲ್ಲಿ ಬರುವುದಿಲ್ಲ ಎಂದು ಎಷ್ಟೋ ಬಾರಿ ಅನ್ನಿಸಿದರೂ ಅವರುಗಳಿಂದ ಸಾಕಷ್ಟು ಅರ್ಥ ಮಾಡಿಕೊಳ್ಳುತ್ತಿದ್ದೇನೆ ಎನ್ನುವ ತೃಪ್ತಿ ಇದೆ.



ಸಂಪನ್ಮೂಲ



**ನಾಗರಾಜ ಎಂ. ಹುಡೇದ**
ಶಿಕ್ಷಕರು
ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ
ಬೈಲಂದೂರ ಗೌಳಿವಾಡ
ಯಲ್ಲಾಪುರ ತಾ., ಉತ್ತರ ಕನ್ನಡ ಜಿ.

**ಚಿತ್ರಾ ವೆಂಕಟರಾಜು**
ನಾಟಕ ಶಿಕ್ಷಕರು
ಸರ್ಕಾರಿ ಪ್ರೌಢಶಾಲೆ,
ಪಿರಿಯಾಪಟ್ಟಣ ತಾ.,
ಮೈಸೂರು ಜಿ.

**ಒಂದು ವರ್ಷದ ಯೋಜನೆಯಾಗಿದ್ದರೆ ಧಾನ್ಯವನ್ನು ಬಿತ್ತು.**
**ಒಂದು ದಶಕದ ಯೋಜನೆಯಾಗಿದ್ದರೆ ಗಿಡ ಮರಗಳನ್ನು ಬೆಳೆಸು.**
**ಒಂದು ತಲೆಮಾರಿನ ಯೋಜನೆಯಾಗಿದ್ದರೆ - ಶಿಕ್ಷಣ ಕೊಡು.**
**(ಚೀನಿ ದಾರ್ಶನಿಕ ಕ್ವಾನ್-ತ್ಸು)**

'ಕಲಿ–ಕಲಿಸು' ಎಂಬುದು ಬಹಳ ಸುಂದರವಾದ ಮತ್ತು ಮುದ ನೀಡುವಂತದ್ದು. ಇಲ್ಲಿ ಕಲಾ ಶಿಕ್ಷಣವೇ ಪ್ರಧಾನ. ನಮ್ಮ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ವಿಭಿನ್ನವಾದ ಮೆರಗನ್ನು 'ಕಲಿ–ಕಲಿಸು' ಯೋಜನೆ ತಂದು ಕೊಟ್ಟಿದೆ. ಅಂತಹದೊಂದು ಹೊಸ ದೃಷ್ಟಿಕೋನವನ್ನು ನಮ್ಮ ಶಿಕ್ಷಕರಲ್ಲಿ ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್ ಸಂಸ್ಥೆಯು 'ಕಲಿ–ಕಲಿಸು' ಯೋಜನೆಯ ಮೂಲಕ ಬೆಳೆಸಿದೆ.

ನಮ್ಮ ಶಾಲಾ ವ್ಯಾಪ್ತಿಯಲ್ಲಿರುವ ಸ್ಥಳೀಯ ಶ್ರೀಮಂತ ಕಲಾ ಪ್ರಕಾರಗಳನ್ನು ಶಾಲಾ ಕೋಣೆಗಳಿಗೆ ತೆಗೆದುಕೊಂಡು ಹೋಗಿ ಕಲಿಕೆಯಲ್ಲಿ ಉತ್ಸಾಹ, ಚೈತನ್ಯ ತುಂಬುವಂತಹ ಕಾರ್ಯವನ್ನು ಐ.ಎಫ್.ಎ. ಮಾಡುತ್ತಿದೆ. ಈ ಕೃತಿಯಲ್ಲಿರುವ ನಮ್ಮ ಶಿಕ್ಷಕರು/ಕಲಾವಿದರು ಸರಕಾರಿ ಶಾಲೆಗಳಲ್ಲಿ ಕೈಗೊಂಡಿರುವ

ಯೋಜನೆಗಳನ್ನು ನೋಡಿದಾಗ ಎಷ್ಟೊಂದು ವೈವಿಧ್ಯಮಯ ಕಲೆ–ಸಂಸ್ಕೃತಿಗಳು ನಮ್ಮಲ್ಲಿವೆ ಎಂಬುದು ನಮ್ಮ ಅರಿವಿಗೆ ಬರುತ್ತದೆ. ಅಲ್ಲದೆ ಹೀಗೂ ಕಲಿಕೆಗೆ ಅನುಕೂಲಿಸಬಹುದೆಂಬ ಆಲೋಚನೆ ನಮಗೆ ಹೊಳೆಯುತ್ತದೆ. ಈ ಎಲ್ಲ ಯೋಜನೆಗಳು ಸಮುದಾಯವು ಶಾಲಾ ಶಿಕ್ಷಣದತ್ತ ಆಸಕ್ತಿಯಿಂದ ಭಾಗವಹಿಸುವಂತೆ ಮಾಡುವುದಲ್ಲದೇ, ನಮ್ಮ ಶಾಲೆ ಮತ್ತು ಶಿಕ್ಷಕರ ಬಗೆಗೆ ಹೆಮ್ಮೆ ಮೂಡಿಸುತ್ತದೆ. ಅವಸಾನದ ಅಂಚಿನಲ್ಲಿರುವ ಕಲೆಗಳು ಮತ್ತು ನಮ್ಮ ನಿರ್ಲ್ಯಕ್ಷ್ಯಕ್ಕೊಳಗಾಗಿರುವ ಸ್ಥಳೀಯ ಕಲೆಗಳು ಈ ಮೂಲಕ ಮುಂದಿನ ಪೀಳಿಗೆಗೆ ವರ್ಗಾವಣೆಗೊಳ್ಳುತ್ತವೆ.

ಪಠ್ಯವನ್ನು ಕಲಿಯಲು ಸಹಪಠ್ಯ ಚಟುವಟಿಕೆಗಳೇ ಮೂಲಾಧಾರ. ಮಕ್ಕಳು ಜ್ಞಾನವನ್ನು ಕಟ್ಟಿಕೊಳ್ಳಲು, ಪಠ್ಯವನ್ನು ಆಸಕ್ತಿದಾಯಕವಾಗಿಸಲು ಮತ್ತು ಆಯಾಸವಿಲ್ಲದೆ ಪರಿಣಾಮಕಾರಿ ಕಲಿಕೆಯಾಗಲು ಇಂತಹ ಪ್ರಯತ್ನಗಳು ನಡೆಯುತ್ತಿರುವುದು ಹರ್ಷವನ್ನುಂಟು ಮಾಡುತ್ತಿದೆ.

ಐ.ಎಫ್.ಎ.ಯು ಮುಂದಿನ ದಿನಗಳಲ್ಲಿ ಸಮಗ್ರ ಕರ್ನಾಟಕದ 'ಕಲಾ ಯೋಜನೆಗಳ' ಸಂಗ್ರಹಗಾರವಾಗುವುದರಲ್ಲಿ ಸಂದೇಹವಿಲ್ಲ. ನಮ್ಮ ಸರಕಾರಿ ಶಾಲಾ ಮಕ್ಕಳ ಶಿಕ್ಷಣಕ್ಕೆ ಒತ್ತು ನೀಡಿ ಅವರ ಕಲಿಕೆಯನ್ನು ಸುಗಮ, ಸುಂದರಗೊಳಿಸುತ್ತಿರುವ ನಮ್ಮ ಶಿಕ್ಷಕರು, ಕಲಾವಿದರು ಸದಾ ಪ್ರಯತ್ನಶೀಲರಾಗಿದ್ದಾರೆ. ಅವರೆಲ್ಲರ ಈ ದೃಢ ಹೆಜ್ಜೆಗಳು ಇತರ ಶಿಕ್ಷಕರುಗಳಿಗೆ ಮಾರ್ಗದರ್ಶಿಗಳಾಗಿವೆ.

**ಜಲಜಾಕ್ಷಿ ಕೆ.ಡಿ.**
ಶಿಕ್ಷಕಿ, ಸ.ಹಿ.ಪ್ರಾ.ಶಾಲೆ, ಕೋಲ್ಚಾರು,
ಸುಳ್ಯ ತಾ., ದಕ್ಷಿಣ ಕನ್ನಡ ಜಿ.
94492 54077



ಶಿಕ್ಷಕರ ಯೋಜನೆ

# ನಾನೂ ನಟಿಸುವೆ



ಓದು–ಬರಹದೊಂದಿಗೆ ಅಭಿವ್ಯಕ್ತಿಸುವ ಸಾಮರ್ಥ್ಯ ವಿದ್ಯಾರ್ಥಿಗಳಿಗೆ ಅಗತ್ಯವೆಂದು ಮನಗಂಡಿರುವ ಶಿಕ್ಷಕಿ ಜಲಜಾಕ್ಷಿಯವರು ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅತ್ಯಂತ ಕುಗ್ರಾಮವಾದ ಕೋಲ್ಚಾರು ಶಾಲೆಯಲ್ಲಿ ತಮ್ಮ ಯೋಜನೆಯನ್ನು ಕಾರ್ಯರೂಪಕ್ಕೆ ಇಳಿಸುತ್ತಿದ್ದಾರೆ. ವಿದ್ಯಾರ್ಥಿಗಳಿಗೆ ನಿರರ್ಗಳ ಸಂಭಾಷಣೆ,

ಭಾವಾಭಿನಯದೊಂದಿಗೆ ಪಠ್ಯಾಧಾರಿತ ಹಾಗೂ ಪಠ್ಯಪೂರಕ ವಿಷಯಗಳಿಗೆ ಪಾತ್ರಗಳ ಮೂಲಕ ಜೀವ ತುಂಬುತ್ತಿದ್ದಾರೆ.

ಇವರ ಶಾಲೆಯಲ್ಲಿ ಕನ್ನಡ, ತುಳು, ಮತ್ತು ಉರ್ದು ಭಾಷೆಗಳನ್ನಾಡುವ ಮಕ್ಕಳಿದ್ದಾರೆ. ವಿದ್ಯಾರ್ಥಿಗಳು ಪಾಠ ಪ್ರಾರಂಭಿಸುವ ಮೊದಲು ಪಠ್ಯದ ಪಾತ್ರಗಳಿಗೆ ಸಂಭಾಷಣೆ ಬರೆಯುವುದು, ಹಂಚಿಕೊಳ್ಳುವುದು, ಸಂಭಾಷಣೆ ಕಲಿಯುವುದು...... ಹೀಗೆ ಅಭಿನಯ ಹೇಳಿಕೊಡಲು ಶಿಕ್ಷಕಿಯ ಹಿಂದೆ ದುಂಬಾಲು ಬೀಳುತ್ತಾರೆ. ಸಣ್ಣ ತರಗತಿಯಲ್ಲಿ ಮುಖವಾಡಗಳನ್ನು ಧರಿಸಿ ಪ್ರಾಣಿ–ಪಕ್ಷಿಗಳ ಪಾತ್ರಗಳೇ ತಾವಾಗಿ ಅಭಿನಯಿಸುವುದನ್ನು ವಿದ್ಯಾರ್ಥಿಗಳು ಇಷ್ಟಪಡುತ್ತಾರೆ. ಮುಖವಾಡಗಳನ್ನು ಧರಿಸಿ ಅವರು ಮಾತನಾಡುವಾಗ ಅವರಿಗಾಗುವ ಆನಂದ ಅಪರಿಮಿತವಾದುದು. ಹಾಗೆ ಮಕ್ಕಳಿಗೆ ಚಿಕ್ಕ ಚಿಕ್ಕ ಸಂಭಾಷಣೆಗಳನ್ನು ಕಲಿಸಿಕೊಡುವ ಪ್ರಯತ್ನವನ್ನು ಮಾಡುತ್ತಿದ್ದಾರೆ.

ಶಿಕ್ಷಕಿ ಜಲಜಾಕ್ಷಿಯವರ 'ನಾನು ಅಭಿನಯಿಸುವೆ' ಎಂಬ ಯೋಜನೆ ಮಕ್ಕಳಲ್ಲಿ ಉತ್ತೇಜನ ನೀಡಿ ಉತ್ತಮ ಕಲಿಕೆಯನ್ನುಂಟು ಮಾಡಲು ಸಾಧ್ಯವಾಗಿದೆ ಎನ್ನುತ್ತಾರೆ. ಎಲ್ಲರಲ್ಲೂ ಒಬ್ಬೊಬ್ಬ ಕಲಾವಿದ ಅಡಗಿರುತ್ತಾನೆ/ಳೆ. ಅವನ/ಳನ್ನು ಹೊರ ಜಗತ್ತಿಗೆ ತೋರಿಸುವ ಕಾರ್ಯವನ್ನು ಇಂತಹ ಯೋಜನೆಗಳು ಮಾಡುತ್ತವೆ. ಹಲವಾರು ಕಾರ್ಯಾಗಾರಗಳ ಮೂಲಕ ಕಲಾವಿದರು, ಬರಹಗಾರರ ಮೂಲಕ ವಿದ್ಯಾರ್ಥಿಗಳಲ್ಲಿ ಅಭಿವ್ಯಕ್ತಿ ಕೌಶಲವನ್ನು ವೃದ್ಧಿಗೊಳಿಸುತ್ತಿದ್ದಾರೆ. ಈ ಎಲ್ಲಾ ಕಾರ್ಯಗಳಲ್ಲಿ ಶಾಲೆಯ ಶಿಕ್ಷಕ, ಶಿಕ್ಷಕಿಯರೆಲ್ಲ ಸಹಕಾರ ನೀಡುತ್ತಿರುವುದು ಉತ್ತಮ ಫಲಶೃತಿಯನ್ನು ಪಡೆಯಲು ಸಹಕಾರಿಯಾಗಿದೆ ಎನ್ನುತ್ತಾರೆ ಜಲಜಾಕ್ಷಿಯವರು. ಮುಂದಿನ ದಿನಗಳಲ್ಲಿ ವಿದ್ಯಾರ್ಥಿಗಳು ಉತ್ತಮ ಭಾಷಾ ಕೌಶಲವನ್ನು ಹೊಂದಬೇಕೆಂಬುದು ಜಲಜಾಕ್ಷಿಯವರ ನಿರೀಕ್ಷೆಯಾಗಿದೆ.



**ಬೇಬಿ ಬಿರಾದಾರ**
ಕಲಾ ಶಿಕ್ಷಕಿ, ಸ.ಪ್ರೌ.ಶಾಲೆ, ಮುಚಲಾಂಬ,
ಬಸವಕಲ್ಯಾಣ ತಾ., ಬೀದರ ಜಿ.
89046 22002



ಶಿಕ್ಷಕ ಪರಿಚಯ

# ಕಾಗದದ ದೋಣಿಯಲಿ...



ಕಲೆಗಳು ಕಲಿಕೆಯನ್ನು ಸುಲಭಗೊಳಿಸುತ್ತವೆಂಬುದು ಸೂರ್ಯನಷ್ಟೇ ಸತ್ಯ. ಯಾವ ಕಲೆ ಯಾವ ಕಲಿಕೆಗೆ ಸೂಕ್ತ ಎಂದು ನಿರ್ಧರಿಸುವ ಹೊಣೆ ಪ್ರಬುದ್ಧ ಮತ್ತು ಯಶಸ್ವಿ ಶಿಕ್ಷಕನಿಗೆ ತಿಳಿದಿರಬೇಕಾಗುತ್ತದೆ. ಅಂತಹ ವಿಭಿನ್ನ ಪ್ರಯತ್ನ ಮಾಡಿರುವ ಶಿಕ್ಷಕಿ ಬೇಬಿ ಬಿರಾದಾರ ಕಾಗದ ಮಡಚುವ ಕಲೆಯ ಮೂಲಕ ರೇಖಾಗಣಿತದ ಕ್ಲಿಷ್ಟಾಂಶಗಳನ್ನು ಸುಲಭ ವಿಧಾನದಲ್ಲಿ ಬೋಧಿಸುತ್ತಿದ್ದಾರೆ.

ಬೇಬಿ ಬಿರಾದಾರ ಅವರು ಬೀದರ ಜಿಲ್ಲೆ ಬಸವಕಲ್ಯಾಣ ತಾಲೂಕಿನ ಸರಕಾರಿ ಪ್ರೌಢ ಶಾಲೆ ಮುಚಲಾಂಬದಲ್ಲಿ ಕಲಾ ಶಿಕ್ಷಕಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಕಲಾ ಶಿಕ್ಷಕಿಯಾದರೂ ತಮ್ಮ ವಿಷಯಕ್ಕೆ


ಪ್ರಜಾವಾಣಿ

ಮುಚಳಂಬ ಪ್ರೌಢಶಾಲೆ ಕಲಾ ಚಟುವಟಿಕೆಯಲ್ಲಿ ಮುಂದು: ಕಾಗದದಿಂದ ಸಿದ್ಧಪಡಿಸಿದ ಮಾದರಿ

ಕಲಾಕೃತಿಗಳಿಂದ ಮಕ್ಕಳಿಗೆ ಪಾಠ ಕಲಿಕೆ

ಮಾತ್ರ ಸೀಮಿತವಾಗದೇ ವಿದ್ಯಾರ್ಥಿಗಳಿಗೆ ಕಠಿಣವೆನಿಸುವ ವಿಷಯಗಳನ್ನು ಕಲಿಸುವತ್ತ ಆಸಕ್ತಿವಹಿಸಿದ್ದಾರೆ. ಮಕ್ಕಳಿಗೆ ಮನರಂಜನೆಯ ಜೊತೆಗೆ ಕಲಿಕೆಯೂ ಸಾಧ್ಯ ಎಂದು ತಿಳಿಸುತ್ತಿದ್ದಾರೆ.

ರೇಖಾ ಗಣಿತ ಹಾಗೂ ಕಾಗದ ಕಲೆಗೂ ಅವಿನಾಭಾವ ಸಂಬಂಧವಿದೆ. ಏಕೆಂದರೆ ಕಾಗದ ಮಡಿಚಿದಾಗ ರೇಖೆಗಳು ಉಂಟಾಗುತ್ತವೆ. ಕಾಗದ ಯಾವ ರೀತಿ ಮಡಚುತ್ತೇವೆಯೋ ಆ ರೀತಿಯಾಗಿ ಆಕೃತಿಗಳು ಉಂಟಾಗುತ್ತವೆ ಆದುದರಿಂದ ರೇಖಾಗಣಿತ ಹಾಗೂ ಕಾಗದ ಕಲೆಗಳು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಕಾಗದ ಕಲೆಯು ಸೃಜನಾತ್ಮಕವಾಗಿ ಅಭಿವ್ಯಕ್ತಿಸುವ ಒಂದು ಉತ್ತಮ ಕಲೆಯಾಗಿದೆ.

ಬೇಬಿ ಬಿರಾದಾರರವರು ಈಗಾಗಲೇ ಹಲವಾರು ಕಾರ್ಯಾಗಾರಗಳ ಮೂಲಕ ಮತ್ತು ನುರಿತ ಸಂಪನ್ಮೂಲ ವ್ಯಕ್ತಿಗಳಿಂದ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದ್ದಾರೆ. ಮಕ್ಕಳಿಂದ ರಚನೆಗೊಂಡಿರುವ ಆಕೃತಿಗಳನ್ನೆಲ್ಲ ಕ್ಲಸ್ಟರ್ ಹಂತದಲ್ಲಿ ಪ್ರದರ್ಶನವನ್ನೂ ಸಹಿತ ಏರ್ಪಡಿಸಿದ್ದಾರೆ. ಮಕ್ಕಳಿಗೆ ಕಠಿಣವೆನಿಸುವ ವಿಷಯಗಳನ್ನೆಲ್ಲ ಮನರಂಜನೆಯ ಜೊತೆಗೆ ಕಲಿಸಬೇಕೆಂಬ ಅವರ ಉತ್ಸಾಹ ಮೆಚ್ಚುಗೆಗೆ ಪಾತ್ರವಾಗಿದೆ. ಇವರು ಅಂತಿಮವಾಗಿ ಪಾಪ್‌ಅಪ್ ಕೃತಿ ಪ್ರಕಟಿಸಲಿದ್ದಾರೆ.

**“ ಈ ಜಗತ್ತು ಎಷ್ಟೊಂದು ದೊಡ್ಡದು ನಾವು ಈ ಕಲೆಯಿಂದ ಏನಾದರು ಸಾಧಿಸಿ ತೋರಿಸಬೇಕು. ದಿನ ಕಳೆದಂತೆ ನಮಗೆ ಕಾಗದ ಕಲೆಯ ಬಗ್ಗೆ ತುಂಬಾ ಇಷ್ಟವಾಗುತಿತ್ತು. ಕಾಗದ ಕಲೆಯಿಂದ ನಮಗೆ ಎಷ್ಟೊಂದು ಮಾದರಿಗಳು ಉದಾಹರಣೆಗೆ ಡಿ.ಎನ್.ಎ. ಮಾದರಿಗಳು ಗೃಹ ಉಪಯೋಗಿ ವಸ್ತುಗಳು ಮಾಡಲು ಪ್ರಾರಂಭಿಸಿದೆವು ”**

**- ಸೌಂದರ್ಯ, 8ನೇ ತ,**

**ಗಂಗಪ್ಪ ಎಸ್. ಎಲ್.**
ಶಿಕ್ಷಕರು, ಸ.ಹಿ.ಪ್ರಾ.ಶಾಲೆ, ಅಲ್ಕೇರಿ ಗೌಳಿವಾಡ,
ಯಲ್ಲಾಪುರ ತಾ., ಉತ್ತರ ಕನ್ನಡ ಜಿ.
99028 93532



ಶಿಕ್ಷಕರ ಯೋಜನೆ

# ಗೌಳಿಗರ ಗೂಡಲ್ಲಿ



ಗೌಳಿ ಸಮುದಾಯವು ಮಹಾರಾಷ್ಟ್ರ ಮೂಲದಿಂದ ತಮ್ಮ ದನಕರುಗಳನ್ನು ಮೇಯಿಸುತ್ತ ವಲಸೆ ಬಂದು ನೆಲೆನಿಂತ ಪ್ರದೇಶವೇ ಅಲ್ಕೇರಿ ಗೌಳಿವಾಡ. ಅವರ ಆ ವಲಸೆಯ ಸಂದರ್ಭದಲ್ಲಿ ಅನೇಕ ವಿಭಿನ್ನ ಅನುಭವಗಳನ್ನು ಅನುಭವಿಸಿರುತ್ತಾರೆ. ಅಂತಹ ವಿಭಿನ್ನ ಅನುಭವಗಳನ್ನು ಅವರದೇ ಶಾಲಾ ಮಕ್ಕಳಿಂದ ದಾಖಲೀಕರಣ ಮಾಡುವ ಮಹತ್ವದ ಕಾರ್ಯವನ್ನು ಗಂಗಪ್ಪ ಎಸ್.ಎಲ್. ಅವರು ಮಾಡುತ್ತಿದ್ದಾರೆ. ಇವರು ಶಿರಸಿ ಶೈಕ್ಷಣಿಕ ಜಿಲ್ಲೆಯ ಯಲ್ಲಾಪುರ ತಾಲೂಕಿನ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕರಾಗಿ

ಕಾರ್ಯನಿರ್ವಹಿಸುತ್ತಿದ್ದಾರೆ. ತಮ್ಮ ಸುದೀರ್ಘ ಬೋಧನಾ ಅನುಭವವನ್ನಾಧರಿಸಿ ಗೌಳಿ ಭಾಷಿಗರ ಮಕ್ಕಳ ಕಲಿಕೆಯನ್ನು ಸುಗಮಗೊಳಿಸುವ ಪ್ರಯತ್ನವನ್ನು ಮಾಡುತ್ತಿದ್ದಾರೆ.

ಗಂಗಪ್ಪ ಅವರು ಗೌಳಿಗರ ಇತಿಹಾಸದ ಹೆಜ್ಜೆ ಗುರುತುಗಳನ್ನು ಹುಡುಕುತ್ತಾ ಮಕ್ಕಳಲ್ಲಿ ಅನ್ವೇಷಣಾ ಗುಣ ಬೆಳೆಸುತ್ತಿದ್ದಾರೆ. ಮಕ್ಕಳು ಊರಿನ ಹಿರಿಯರನ್ನು ಸಂದರ್ಶಿಸಿ ಮಾಹಿತಿಗಳನ್ನು ಕಲೆಹಾಕುತ್ತಾರೆ, ಮತ್ತೆ ಶಿಕ್ಷಕರ ಮಾರ್ಗದರ್ಶನದಲ್ಲಿ ಕಥನಗಳನ್ನಾಗಿ ಮರುಸೃಷ್ಟಿಸುತ್ತಾರೆ. ಹೀಗೆ ಆ ಮಕ್ಕಳೆಲ್ಲ ತಮ್ಮ ಸಮುದಾಯದ ಬಗ್ಗೆ ಹೆಮ್ಮೆ ಪಡುವಂತ ಕಾರ್ಯವನ್ನು ಶಿಕ್ಷಕ ಗಂಗಪ್ಪ ಅವರು ಮಾಡುತ್ತಿದ್ದಾರೆ. ಅವರ ಶಾಲಾ ಪರಿಸರದ ಗೌಳಿ ಸಮುದಾಯದವರೆಲ್ಲ ಗಂಗಪ್ಪ ಅವರ ಕಾರ್ಯವನ್ನು ಶ್ಲಾಘಿಸುವುದರ ಜೊತೆಗೆ ಶಾಲೆಯನ್ನೂ ಬಹಳಷ್ಟು ಪ್ರೀತಿಸುತ್ತಾರೆ, ಗೌರವಿಸುತ್ತಾರೆ.

ಗೌಳಿ ಸಮುದಾಯವು ತಮ್ಮದೇ ಆದ ವಿಶಿಷ್ಟ ಕಲೆ, ಸಂಸ್ಕೃತಿಗಳನ್ನು ಇಂದಿಗೂ ಉಳಿಸಿಕೊಂಡು ಬಂದಿದೆ. ಇಂದು ಶಾಲೆಗೆ ಬರುತ್ತಿರುವ ಮಕ್ಕಳೆಲ್ಲ ಮೊದಲ ತಲೆಮಾರಿನವರಾಗಿದ್ದಾರೆ. ಗೌಳಿ ಸಮುದಾಯದ ವಲಸೆಯ ಸಂದರ್ಭದಲ್ಲಿ ತಮ್ಮ ಹಿರಿಯರಿಗಾದ ಅನುಭವಗಳನ್ನು ಅವರ ಮಕ್ಕಳಿಂದಲೇ 'ನಮ್ಮ ಪಯಣ' ಶೀರ್ಷಿಕೆಯಡಿಯಲ್ಲಿ ದಾಖಲೀಕರಣ ಮಾಡುವ ಯೋಜನೆ ಇವರದಾಗಿದೆ.



**ಗೀತಾ ಕೆ.ಎಚ್.**
ಶಿಕ್ಷಕಿ, ಸ.ಕಿ.ಪ್ರಾ.ಶಾಲೆ, ಯಲಗುಡಿಗೆ,
ಚಿಕ್ಕಮಗಳೂರು ತಾ. ಮತ್ತು ಜಿ.
70229 62666





# ಕಲಿಕೆಯ ಕಸೂತಿ

ಬುಡಕಟ್ಟು ಸಮುದಾಯಗಳಲ್ಲಿ ಒಂದಾದ ಬಂಜಾರ ಅಂದರೆ ಲಂಬಾಣಿ ಸಮುದಾಯದ ನೃತ್ಯ ಮತ್ತು ಕಸೂತಿ ಕಲೆಯನ್ನು ಕಲಿಕೆಯಲ್ಲಿ ಅಳವಡಿಸಿಕೊಂಡು ಸಂತಸದಾಯಕ ಕಲಿಕೆ ಆಗಬೇಕೆಂಬ ಮಹತ್ವಾಕಾಂಕ್ಷೆ ಚಿಕ್ಕಮಗಳೂರು ತಾಲೂಕಿನಲ್ಲಿರುವ ಯಲಗುಡಿಗೆ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕಿ ಗೀತಾ ಕೆ.ಎಚ್. ಅವರದು.

ಇವರು ಕನ್ನಡ ವಿಷಯದ ಪದ್ಯಗಳಿಗೆ, ಜನಪದ ಗೀತೆಗಳಿಗೆ ಕೋಲಾಟವನ್ನು ಅಳವಡಿಸಿಕೊಂಡು ಕಲಿಸುತ್ತಿದ್ದಾರೆ. ಇಲ್ಲಿ ಗಾಯನ, ತಾಳ, ಲಯದ ಜೊತೆಗೆ ದೈಹಿಕವಾಗಿಯೂ ತಮ್ಮನ್ನು ತಾವು ತೊಡಗಿಸಿಕೊಳ್ಳುವುದರಿಂದ ಮಕ್ಕಳ ಕಲಿಕೆಯ ಮೇಲೆ ಹೆಚ್ಚು ಪರಿಣಾಮ ಬೀರುತ್ತದೆ ಎನ್ನುತ್ತಾರೆ. ಕಲಿಕೆಯಲ್ಲಿ ಮಕ್ಕಳಿಗೆ ಆಸಕ್ತಿ ಕೆರಳಿಸುವುದರ ಜೊತೆಗೆ ಮನದಟ್ಟು ಮಾಡಬೇಕೆಂಬುದು ಇವರ ಹಂಬಲವಾಗಿದೆ. ಹಾಗೆಯೇ ಗಣಿತ, ಪರಿಸರ ಅಧ್ಯಯನದ ಆಯ್ದ ಪಾಠಗಳಲ್ಲಿ ಕಸೂತಿ ಕಲೆಯ ಪ್ರಯೋಗವನ್ನೂ ಮಾಡುತ್ತಿದ್ದಾರೆ. ಉದಾ: ರೇಖಾಕೃತಿಗಳು, ಭಿನ್ನರಾಶಿಗಳು, ಪ್ರಾಣಿ, ಪಕ್ಷಿಗಳ ಚಿತ್ರಗಳನ್ನು ದಾರಗಳಲ್ಲಿ ಹೆಣೆಸುವ ಮೂಲಕ ಪರಿಣಾಮಕಾರಿ ಕಲಿಕೆಯನ್ನು ಪ್ರೋತ್ಸಾಹಿಸುತ್ತಿದ್ದಾರೆ.

ಕೋಲಾಟ ಮತ್ತು ಕಸೂತಿ ಕಲೆಯ ಸಂಪನ್ಮೂಲ ವ್ಯಕ್ತಿಗಳಿಂದ ಶಾಲೆಯಲ್ಲಿ ಕಾರ್ಯಾಗಾರಗಳನ್ನು ಹಮ್ಮಿಕೊಂಡಿದ್ದಾರೆ. ಬಂಜಾರ ಸಮುದಾಯದ ಮಹಿಳೆಯರು ಗೀತಾರವರ ಪ್ರಯೋಗದಲ್ಲಿ ಕೈಜೋಡಿಸಿದ್ದಾರೆ. "ಶಾಲೆಯ ಪುಟ್ಟ ಮಕ್ಕಳು ಸೂಜಿ-ದಾರ ಹಿಡಿದು ತಾವು ಕಲಿತ ಅಕ್ಷರಗಳು, ಪದಗಳು, ಚಿತ್ರಗಳು, ಹೂಗಳು, ಆಕೃತಿಗಳನ್ನು ರಚಿಸಿದ್ದಲ್ಲದೆ ತಮ್ಮ ಹೆಸರು, ಶಾಲೆಯ ಹೆಸರನ್ನು ಬಟ್ಟೆಯ ಮೇಲೆ ಚಿತ್ತಾರ ಮೂಡಿಸುತ್ತಿರುವುದು ಇಡೀ ನಮ್ಮ ಶಾಲಾ ವಾತಾವರಣವನ್ನೇ ಸುಂದರಗೊಳಿಸುತ್ತಿದೆ" ಎನ್ನುತ್ತಾರೆ ಶಿಕ್ಷಕಿ ಗೀತಾ ಅವರು.



ಗುಂಡುರಾವ್ ದೇಸಾಯಿ
ಶಿಕ್ಷಕರು, ಸ.ಮಾ.ಹಿ.ಪ್ರಾ.ಶಾಲೆ
ಮಸ್ಕಿ , ರಾಯಚೂರು ಜಿ.,
97403 46338



ಶಿಕ್ಷಣ ಯೋಜನೆ

# ಕಥಾಲೋಕ



ಗುಂಡುರಾವ್ ದೇಸಾಯಿರವರು ರಾಯಚೂರು ಜಿಲ್ಲೆ ಮಸ್ಕಿಯ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕಾರ್ಯನಿರತರಾಗಿದ್ದಾರೆ. ಸಾಹಿತ್ಯ, ಕಲೆಗಳಲ್ಲಿ ಆಸಕ್ತರಾಗಿರುವ ಇವರು ಹಲವಾರು ಪತ್ರಿಕೆಗಳಿಗೂ ಬರೆಯುತ್ತಿರುತ್ತಾರೆ.

ಇವರು ತಮ್ಮ ಶಾಲಾ ಮಕ್ಕಳಲ್ಲಿ ಸಾಹಿತ್ಯದ ಸವಿಯೂಟವನ್ನು ಮಾಸ್ತಿಯವರ ಸಣ್ಣ ಕಥೆಗಳ ಮೂಲಕ ಉಣಬಡಿಸುತ್ತಿದ್ದಾರೆ. ಕನ್ನಡದ 'ಸಣ್ಣ ಕಥೆಗಳ ಜನಕ'ರೆಂದೇ ಖ್ಯಾತರಾದ ಮಾಸ್ತಿಯವರ ಕಥೆಗಳನ್ನು ಆಧರಿಸಿ ಮಕ್ಕಳಲ್ಲಿ ಓದುವ, ಸಂವಾದಿಸುವ ಮತ್ತು ಕಥೆ ಹೇಳುವ ಕೌಶಲವನ್ನು ಬೆಳೆಸುವ ಯೋಜನೆ ಇವರದಾಗಿದೆ.

ಸಂಪನ್ಮೂಲ ಸಾಹಿತಿಗಳಿಂದ ಹಲವಾರು ಕಾರ್ಯಾಗಾರಗಳನ್ನು ಹಮ್ಮಿಕೊಂಡು ವಿದ್ಯಾರ್ಥಿಗಳಲ್ಲಿ ವಿವೇಚನಾ ಶಕ್ತಿ, ರಚನಾ ಕೌಶಲ, ಭಾಷೆಯ

ವೈಶಿಷ್ಟತೆಯನ್ನು ತಿಳಿಸುವ ಪ್ರಯತ್ನ ನಡೆಸಿದ್ದಾರೆ. ಪ್ರಯೋಗದ ಮುಕ್ತಾಯದಲ್ಲಿ ಮಕ್ಕಳ ಸ್ವರಚಿತ ಕಥೆಗಳನ್ನು ಪ್ರಕಟಿಸಲಿದ್ದಾರೆ. ವಿದ್ಯಾರ್ಥಿ ದೆಸೆಯಲ್ಲಿಯೆ ಮಕ್ಕಳು ತಾವು ರಚಿಸಿದ ಕಥೆಯು ಸಂಕಲನ ರೂಪದಲ್ಲಿ ಪ್ರಕಟಗೊಂಡರೆ ಇದಕ್ಕಿಂತ ಹೆಮ್ಮೆ ಮತ್ತೊಂದಿಲ್ಲ. ಮುಂದೊಂದು ದಿನ ನಾಡಿನ ಸಾಹಿತ್ಯ ರತ್ನಗಳಾದರೂ ಆಗಬಹುದು ಎಂಬುದು ಶಿಕ್ಷಕ ಗುಂಡುರಾವ್ ಅವರ ಆಶಯವಾಗಿದೆ.


## 'ರಚನಾತ್ಮಕ ಚಟುವಟಿಕೆ ಆಗತ್ಯ'

ಮಸ್ಕಿ: 'ಮಕ್ಕಳಿಗೆ ಪಠ್ಯಪುಸ್ತಕದ ಜೊತೆಗೆ ಸೃಜನಶೀಲ ಬದುಕಿಗೆ ಬೇಕಾದ ರಚನಾತ್ಮಕ ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕು' ಎಂದು ಮಕ್ಕಳ ಸಾಹಿತಿ ಡಾ.ನಿಂಗು ಹೇಳಿದರು.

ಶಿಕ್ಷಣ ಇಲಾಖೆ ಹಾಗೂ ಬೆಂಗಳೂರಿನ ಐಎಫ್‌ಎ ಸಂಸ್ಥೆ ಸಹಯೋಗದಲ್ಲಿ ಈಚೆಗೆ ಹಮ್ಮಿಕೊಂಡಿದ್ದ ಎರಡು ದಿನಗಳ ಮಕ್ಕಳ ಕಥಾ ಕಮ್ಮಟ ಹಾಗೂ 'ಚಿಗುರು' ಪತ್ರಿಕೆ ಬಿಡುಗಡೆ ಸಮಾರಂಭದಲ್ಲಿ ಅವರು ಮಾತನಾಡಿದರು.

'ಶಾಲೆಗಳಲ್ಲಿ ಏಕರೂಪದ ಶಿಕ್ಷಣ ನೀಡಲಾಗುತ್ತಿದೆ. ಸಮಾಜದಲ್ಲಿ ಬಹುಮುಖ ಶಿಕ್ಷಣ ದೊರೆಯುತ್ತದೆ. ಮಕ್ಕಳು ಸಮಾಜದಲ್ಲಿ ನಡೆಯುವ ಘಟನೆಗಳನ್ನು ನೋಡಿ ಭಾವನೆಗಳಿಗೆ ಅಕ್ಷರ ರೂಪ ಕೊಟ್ಟಾಗ ಕಥೆ, ಕವನ, ಸಿನಿಮಾ ರೂಪ ಪಡೆದುಕೊಳ್ಳುತ್ತದೆ' ಎಂದರು.

ಬಿಇಒ ಸೋಮಶೇಖರಗೌಡ ಪಾಟೀಲ 'ಚಿಗುರು' ಮಕ್ಕಳ ಪತ್ರಿಕೆ ಬಿಡುಗಡೆ ಮಾಡಿದರು. ಸಾಹಿತಿ ಗಣೇಶ ಪಿ. ನಾಡೂರ, ಮಹಾಂತೇಶ ಮಸ್ಕಿ, ಬಸವರಾಜ, ಗುಂಡೂರಾವ್ ದೇಸಾಯಿ, ನಾಗನಗೌಡ, ಪ್ರಾಚಾರ್ಯ ರಂಗಪ್ಪ, ಬಸ್ಸಪ್ಪ ತನಿಖೆದಾರ, ಆದಪ್ಪ ಹೆಂಬಾ, ಇದ್ದರು.

"ಸರಿಯಾಗಿ ಬರೆಯಲು ಬಾರದ ಸ್ನೇಹಿತರು ಬರೆಯುತ್ತಿರುವುದು ನಮಗೆ ಸಂತೋಷ ತಂದಿದೆ. ಅದಕ್ಕಾಗಿ ನಮ್ಮ ಗುರುಗಳು ವಿಶೇಷ ಸಂಚಿಕೆ ಮಾಡಿದ್ದರು. ನಾನು ಈವರೆಗೂ ಹಲವಾರು ಕವಿಗೋಷ್ಠಿಗಳಲ್ಲಿ ಭಾಗವಹಿಸಿದ್ದೇನೆ. ಅನೇಕ ಪತ್ರಿಕೆಗಳಲ್ಲಿ ನಾನು ಬರೆದ ಕಥೆಗಳು ಪ್ರಕಟಗೊಂಡಿವೆ. ಇದುವರೆಗೆ 45 ಕವಿತೆ 12 ಕಥೆ, ಮೂರು ವಚನಗಳನ್ನು ಬರೆದಿರುವೆ."

- ಮೌನೇಶ ಬಸವರಾಜ 7 ನೇ ತ.



ರವಿಚಂದ್ರ ಡಿ.
ಶಿಕ್ಷಕರು, ಸ.ಹಿ.ಪ್ರಾ.ಶಾಲೆ, ಮಲ್ಲಾಪುರ.
ಮಸ್ಕಿ ತಾ., ರಾಯಚೂರು ಜಿ.,
99809 52630



ಶಿಕ್ಷಕರ ಯೋಜನೆ



# ಜನಪದ ಸೊಗಡು

ಜನಪದವೆಂಬುದು ನಮ್ಮೆಲ್ಲ ಭಾಷೆಗಳ ತಾಯಿಬೇರಾಗಿದೆ. ಅಂತಹ ಸ್ಥಳೀಯವಾದ ಕೆಲ ಜನಪದ ಹಾಡುಗಳನ್ನು ಶಾಲೆಯಲ್ಲಿ ಮಕ್ಕಳ ಕಲಿಕೆಗೆ ಅಳವಡಿಸಿಕೊಂಡರೆ ಹೇಗೆ? ಎಂಬ ಆಲೋಚನೆಯಿಟ್ಟುಕೊಂಡು ಕಾರ್ಯರೂಪಕ್ಕಿಳಿಸುವ ಪ್ರಯತ್ನದಲ್ಲಿದ್ದಾರೆ ಶಿಕ್ಷಕ ರವಿಚಂದ್ರರವರು. ಇವರು ರಾಯಚೂರು ಜಿಲ್ಲೆಯ ಮಸ್ಕಿ ತಾಲೂಕಿನ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕಾರ್ಯಪ್ರವೃತ್ತರಾಗಿದ್ದಾರೆ.

"ಜಾನಪದ ಅನುಸಂಧಾನ – ಮಕ್ಕಳ ಪಯಣ ಊರ ಜಾನಪದ ಪರಂಪರೆಯತ್ತ" ಎಂಬ ಯೋಜನೆಯಲ್ಲಿ ತಮ್ಮ ಊರಿನಲ್ಲಿಯೇ ಇರುವ ಜನಪದ ಗೀತೆ ಹಾಗೂ ಕಲೆಗಳನ್ನು ಹುಡುಕುವ ಕಾರ್ಯವನ್ನು ತಮ್ಮ ಶಾಲೆಯ ವಿದ್ಯಾರ್ಥಿಗಳ ಮೂಲಕ ಮಾಡುತ್ತಿದ್ದಾರೆ. ಸಮುದಾಯದ ಕಲಾವಿದರನ್ನು ಈ ಯೋಜನೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಅವರ ಮುಖೇನ ಮಕ್ಕಳು ಸ್ಥಳೀಯ ಜನಪದ ಹಾಡುಗಳನ್ನು, ಡೊಳ್ಳಿನ ಪದಗಳನ್ನು ಕಲಿತಿದ್ದಾರೆ.



ಬೀಸುವ ಪದ, ಸೋಬಾನೆ ಹಾಡುಗಳು, ಗೌರಿ ಹಾಡುಗಳು, ಜೋಗುಳ ಹಾಡುಗಳು, ಡೊಳ್ಳಿನ ಪದಗಳು ಮತ್ತು ಸ್ತ್ರೀಯರ ಕುರಿತಾದ ಹಾಡುಗಳನ್ನು ಪಠ್ಯದೊಂದಿಗೆ ಸಮೀಕರಿಸಿ, ವಿಸ್ತರಿಸಿ ಕಲಿಸುವ ಹಲವು ಸಾಧ್ಯತೆಗಳನ್ನು ಅವರು ಮಾಡುತ್ತಿದ್ದಾರೆ. ಇದರ ಮುಂದುವರಿಕೆಯಾಗಿ ಸ್ಥಳೀಯ ಜನಪದ ಹಾಡುಗಳ ಮೂಲಕ ಪರಿಸರ ಹಾಗೂ ಗಣಿತ ಪಠ್ಯವನ್ನು ಕಲಿಸುವ ಪ್ರಯತ್ನವನ್ನು ನಡೆಸಿದ್ದಾರೆ.

ನಮ್ಮ ಹಳ್ಳಿಯ ಜನಪದ ಸಂಪತ್ತನ್ನು ಮುಂದಿನ ತಲೆಮಾರಿಗೆ ಹಸ್ತಾಂತರಗೊಳಿಸುವ ನಿಟ್ಟಿನಲ್ಲಿ ಇವರ ಯೋಜನೆಯ ಫಲಿತವಾಗಿ "ಮಕ್ಕಳ ಜಾನಪದ ಅನುಸಂಧಾನ" ಕೃತಿಯು ಪ್ರಕಟವಾಗಲಿದೆ.




" ನಮ್ಮೂರ ಶಾಲೆಯಲ್ಲಿ ಈಗ ಜಾನಪದ ಸಂಭ್ರಮ, ನಮ್ಮ ಮನೆಯಲ್ಲಿ ನಾವು ಹಾಡುವ ಹಾಡು ಮಕ್ಕಳು ಈವರೆಗೂ ಕಲಿತಿರಲಿಲ್ಲ. ಈಗ ಶಿಕ್ಷಕರು ಹೇಳಿದ್ದಾರೆಂದು ಎಲ್ಲ ಕಲಿತಿದ್ದಾರೆ. ನಮ್ಮ ಮಕ್ಕಳ ಬಾಯಲ್ಲಿ ನಮ್ಮ ಜಾನಪದ ಹಾಡು ಕೇಳುವುದೇ ನಮಗೆ ಹೆಮ್ಮೆ.. "

- ಸೂಗಪ್ಪ,
ಎಸ್.ಡಿ.ಎಂ.ಸಿ. ಅಧ್ಯಕ್ಷ

**ಕೊಟ್ರೇಶ ಬಿ.**
ಸಿಆರ್‌ಪಿ, ಪಗಡದಿನ್ನಿ,
ಸಿಂಧನೂರ ತಾ., ರಾಯಚೂರು ಜಿಲ್ಲೆ
83100 20942



ಶಿಕ್ಷಕರ ಯೋಜನೆ

# ನಾವ್ ಬರೀತಿವಿ




ಮಕ್ಕಳು ಈ ಅದ್ಭುತ ಲೋಕದ ಸುಂದರ ಕನಸುಗಾರರು. ಅವರ ಕಲ್ಪನೆಗಳಿಗೆ, ಸೃಜನಾತ್ಮಕತೆಗೆ ನೀರು, ಗೊಬ್ಬರ ಎರೆದು ಪೋಷಣೆ ಮಾಡಿದರೆ ಅದು ಉತ್ತಮ ಫಲ ಕೊಡುತ್ತದೆ. ಹಾಗೆ ಅವಕಾಶ ಒದಗಿಸಿ ಕೊಡುವುದೂ ಸಹಿತ ನಮ್ಮ ಶಿಕ್ಷಣದ ಘನ ಉದ್ದೇಶವಾಗಿದೆ. ಅಂತಹದೊಂದು ಕ್ರಿಯಾಶೀಲತೆಗೆ ಅವಕಾಶ ಮಾಡಿಕೊಟ್ಟಿರುವ ಕೊಟ್ರೇಶ ಅವರು ಮಕ್ಕಳಿಂದಲೇ ಪೂರ್ಣ ಪ್ರಮಾಣದ ಪತ್ರಿಕೆಯನ್ನು ಪ್ರಕಟಿಸುವ ಕಾರ್ಯಕ್ಕೆ ಮಾರ್ಗದರ್ಶನವನ್ನು ನೀಡುತ್ತಿದ್ದಾರೆ.

ಯೋಜನೆಯ ಪ್ರಾರಂಭದಲ್ಲಿ ಸಮೂಹ ಸಂಪನ್ಮೂಲ ವ್ಯಕ್ತಿಯಾಗಿ ಕಾರ್ಯ ನಿರ್ವಹಿಸುತ್ತಿದ್ದ ಕೊಟ್ರೇಶ ಅವರು ಪ್ರಸ್ತುತ ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನ ಬೆಳಗುರ್ಕಿ ಉನ್ನತೀಕರಿಸಿದ ಸರಕಾರಿ ಹಿರಿಯ

ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕರಾಗಿದ್ದಾರೆ. ಯೋಜನೆಯ ಭಾಗವಾಗಿ ಒಂದು ಪತ್ರಿಕೆಯಲ್ಲಿರಬೇಕಾದ ಅಂಶಗಳು ಹಾಗೂ ವಿನ್ಯಾಸವನ್ನು ಮಕ್ಕಳಿಗೆ ಸಂಪನ್ಮೂಲ ವ್ಯಕ್ತಿಗಳಿಂದ ಪರಿಚಯಿಸಿದ್ದಾರೆ. ಪತ್ರಿಕೋದ್ಯಮದ ಕಲ್ಪನೆಯನ್ನು ಮಕ್ಕಳಲ್ಲಿ ಬಿತ್ತುವ ಸಲುವಾಗಿ ವಿವಿಧ ಪತ್ರಿಕೆಗಳನ್ನು ಮಕ್ಕಳು ಓದಲು ಪ್ರೇರೇಪಿಸಿದ್ದಾರೆ. ಮಕ್ಕಳು ಪತ್ರಿಕೆಗಳನ್ನು ಓದುವುದರ ಜೊತೆಗೆ ತಾವೇ ತಮ್ಮ 'ಪೆನ್ಸಿಲ್' ಪತ್ರಿಕೆಯ ಲೇಖನ, ಕಥೆ, ಕವನ, ಚಿತ್ರ, ಪದಬಂಧ ಮುಂತಾದವುಗಳನ್ನು ರಚಿಸುವ ಪ್ರಯತ್ನ ನಡೆಸಿದ್ದಾರೆ.

ಈ ಯೋಜನಾವಧಿಯಲ್ಲಿ ಒಟ್ಟು ನಾಲ್ಕು 'ಪೆನ್ಸಿಲ್' ಸಂಚಿಕೆಗಳನ್ನು ಮಕ್ಕಳೇ ರೂಪಿಸಿ ಪ್ರಕಟಿಸಲಿದ್ದಾರೆ. ಅಂತೆಯೇ ಯೋಜನೆಯ ನಂತರವೂ ಈ ಮಕ್ಕಳ ಪತ್ರಿಕೆಯನ್ನು ಮುಂದುವರೆಸುವ ಆಶಯ ಅವರದಾಗಿದೆ.




ಮಕ್ಕಳ ದ್ವೈಮಾಸ ಪತ್ರಿಕೆ
ಪೆನ್ಸಿಲ್
ನಾವ್ ಬರಿತೀವಿ...
ಸಂಪಾದಕೀಯ...
ಚಿಂದಿ ಆಯುವ ಮಕ್ಕಳ 'ಬಾಲಕನಾಮ್'
ಎಷ್ಟು ಚೆಂದ ನಮ್ ಶಾಲಿ, ಓದ್ ಬೇಕಂದ್ರ ಖುಷಿ ಇಲ್ಲಿ
ಮಕ್ಕಳ ದಿನದಂದು ಸರಳ ವಿಜ್ಞಾನ ಪ್ರಯೋಗ

"ನಮಗೆ ಪೆನ್ಸಿಲ್ ಪತ್ರಿಕೆ ಎಂದರೆ ತುಂಬಾ ಇಷ್ಟ. ನಾವು ಬರೆದ ವಿಷಯಗಳನ್ನು ಅಲ್ಲಿ ಹಾಕುತ್ತಾರೆ. ಅವುಗಳನ್ನು ನಮ್ಮ ತಂದೆತಾಯಿಯರಿಗೆ ತೋರಿಸಿದಾಗ ಅವರು ಖುಷಿ ಪಡುತ್ತಾರೆ. ನಮಗೂ ಖುಷಿ ಆಗುತ್ತದೆ."

-ಮಲ್ಲಿಕಾ. 8 ನೇ ತ.

**ದಂಡಪ್ಪಗೌಡ ಐ. ಪಾಟೀಲ**
ಸಹಶಿಕ್ಷಕರು, ಸ.ಪ್ರೌ.ಶಾಲೆ, ಅಂಕಲಗಿ,
ಜೇವರ್ಗಿ ತಾ., ಕಲಬುರಗಿ ಜಿ.,
86605 72899





# ಮಕ್ಕಳ ಸ್ವಗತಗಳು

ದಂಡಪ್ಪಗೌಡ ಐ. ಪಾಟೀಲ ಅವರು ಕಲಬುರಗಿ ಜಿಲ್ಲೆಯ ಸರಕಾರಿ ಪ್ರೌಢಶಾಲೆ ಸಹಶಿಕ್ಷಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಪ್ರಸ್ತುತ ಇವರು 'ನನ್ನ ಸ್ವಗತಗಳು' ಎಂಬ ಯೋಜನೆಯ ಮೂಲಕ ಕನ್ನಡ ಸಾಹಿತ್ಯದ ಹಿರಿಯ ಲೇಖಕರ ಸ್ವಗತಗಳನ್ನು ಮಕ್ಕಳಿಗೆ ಪರಿಚಯಿಸುತ್ತಿದ್ದಾರೆ. ಆ ಮೂಲಕ ಮಕ್ಕಳು ತಮ್ಮ ಸ್ವ-ಅನುಭವಗಳನ್ನು ಅಭಿವ್ಯಕ್ತಿಸಲು ಪ್ರೋತ್ಸಾಹಿಸುತ್ತಿದ್ದಾರೆ.

ಮಕ್ಕಳ ಅನುಭವ ಕೋಶದಲ್ಲಿ ಹಲವಾರು ನೆನಪುಗಳು ದಾಖಲಾಗಿರುತ್ತವೆ. ಗೆಳೆಯರೊಂದಿಗೆ ಕಳೆದ ಕ್ಷಣಗಳು, ತಿರುಗಾಡಿದ ಜಾತ್ರೆಗಳು, ಶಾಲೆಯಲ್ಲಿ ಕಳೆದ ಕ್ಷಣಗಳು... ಹೀಗೆ ಹಲವು ಮರೆಯಲಾರದ ಅನುಭವಗಳನ್ನು ಗೆಳೆಯರೊಂದಿಗೆ , ಪಾಲಕರೊಂದಿಗೆ ಮತ್ತು ಶಿಕ್ಷಕರೊಂದಿಗೆ ಮುಕ್ತವಾಗಿ ಬರಹಗಳ ಮೂಲಕ ಹಂಚಿಕೊಳ್ಳುವ ಆತ್ಮವಿಶ್ವಾಸವನ್ನು ಇವರು ಬೆಳೆಸುತ್ತಿದ್ದಾರೆ. ಈ ಮೂಲಕ ಮಕ್ಕಳು ಧನಾತ್ಮಕವಾಗಿ ಚಿಂತಿಸುವ ಗುಣವನ್ನು ಬೆಳೆಸಿಕೊಳ್ಳುತ್ತಾರೆ. ಇಂತಹ ಪ್ರಯತ್ನಗಳಿಂದ ಪಾಠಗಳ ಬೋಧನೆಯ ನಂತರ ತಮ್ಮದೇ ಆದ ಅಭಿಪ್ರಾಯವನ್ನು ವ್ಯಕ್ತಪಡಿಸಲು ವಿದ್ಯಾರ್ಥಿಗಳು ಯಶಸ್ವಿಯಾಗುತ್ತಿರುವುದು ಯೋಜನೆಯ ಯಶಸ್ಸಿಗೆ ಹಿಡಿದ ಕೈಗನ್ನಡಿ.



ಸ್ಥಳೀಯವಾಗಿ ಶಾಲೆ ಇರುವ ಪ್ರದೇಶದಲ್ಲಿ ಬಾಲ್ಯವಿವಾಹ ಎನ್ನುವುದು ಸಾಮಾನ್ಯ ಸಂಗತಿಯಾಗಿದೆ. ಅದರ ಪ್ರಮಾಣ ಎಷ್ಟಿತ್ತೆಂದರೆ ಪ್ರತಿ ಐದರಲ್ಲಿ ಎರಡು ಹುಡುಗಿಯರು 18 ವರ್ಷದೊಳಗೆ ಮದುವೆಯಾಗಿದ್ದಾರೆಂದು ತಿಳಿದುಬರುತ್ತದೆ. ಇಂಥಹ ಅನೇಕ ಶೋಷಿತ ಮಕ್ಕಳು ತಾವು ಅನುಭವಿಸುವ ತುಮುಲಗಳು, ಎದುರಿಸುವ ಸವಾಲುಗಳು ಹಾಗೂ ಅವುಗಳನ್ನು ನಿರ್ವಹಿಸಿಲು ತಾವೇ ಕಂಡುಕೊಳ್ಳುವ ಮಾರ್ಗಗಳ ಬಗ್ಗೆ ಎಲ್ಲಿಯೂ ವ್ಯಕ್ತಪಡಿಸಲು ಅವಕಾಶಗಳು ಸಿಗದೇ ಆಂತರಿಕವಾಗಿ ಬೇಗುದಿ ಅನುಭವಿಸುತ್ತಿರುತ್ತಾರೆ. ಆದರೆ ಇಂಥಹ ಮಕ್ಕಳಿಗೆ ತಮ್ಮ ತಳಮಳಗಳನ್ನು, ಆಸೆಗಳನ್ನು 'ನನ್ನ ಸ್ವಗತ'ಗಳ ಮುಖೇನ ಹಂಚಿಕೊಳ್ಳಲು ಪಾಟೀಲರು ವೇದಿಕೆಯೊಂದನ್ನು ಕಲ್ಪಿಸಿದ್ದಾರೆ. ಈ ಯೋಜನೆಯ ಮುಕ್ತಾಯದಲ್ಲಿ ಇವರು ವಿದ್ಯಾರ್ಥಿಗಳ ಸ್ವಗತಗಳನ್ನು ಸಂಗ್ರಹಿಸಿ ಪ್ರಕಟಿಸಲಿದ್ದಾರೆ.

**"ಹೆಣ್ಣು ಮಕ್ಕಳು ಕೊಟ್ಟ ಮನೆಗೆ ಹೋಗುತ್ತಾರೆ ಎಂಬ ತಂದೆತಾಯಿಯರ ಕೆಟ್ಟ ಧೋರಣೆ ನಮಗೆ ಕಷ್ಟಕರ ಎನಿಸುತ್ತಿದೆ. ಅದೆ ಗಂಡು ಮಕ್ಕಳಾದರೆ ಅವರನ್ನು ಸಾಕುತ್ತಾರಲ್ಲ ಎಂಬ ಆಸೆ ಅವರಿಗೆ. ಆದರೆ ಹೆಣ್ಣು ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಿದರೆ ಅವರು ಸಾಕುತ್ತಾರಲ್ಲ. ಎಂಬ ಕಲ್ಪನೆಯು ಅವರಲ್ಲಿಲ್ಲ. ಬಡವರ ಮಕ್ಕಳಾದರೆ ಶಾಲೆ ಕಲಿಯಬಾರದೆ? ಎಂಬುದು ನನ್ನ ಪ್ರಶ್ನೆಯಾಗಿದೆ."**

**- ಸೂರಮ್ಮ ಮಹಾದೇವಪ್ಪ, ೮ ನೇ ತ.**



**ರಾಮಗಿರಿ ಪೋಲೀಸ್ ಪಾಟೀಲ್**
ದೃಶ್ಯ ಕಲಾವಿದರು,
ಕೋಗನೂರು, ಕಲಬುರ್ಗಿ
98864 09615



ಕಲಾವಿದರ ಪರಿಚಯ

# ತೊಗರಿಯ ಸುತ್ತಾಮುತ್ತಾ



ಇವರು ದೃಶ್ಯ ಕಲಾವಿದರು. ಕಲಬುರ್ಗಿಯ 'ದ ಐಡಿಯಲ್ ಫೈನ್‌ಆರ್ಟ್ ಇನ್‌ಸ್ಟಿಟ್ಯೂಟ್' ನಲ್ಲಿ ತರಬೇತಿ ಪಡೆದಿದ್ದಾರೆ. ಪಾಟೀಲರು, ಕಲಬುರ್ಗಿಯ ಕೊಗನೂರು ಗ್ರಾಮದ ಕಿರಿಯ ಪ್ರಾಥಮಿಕ ಶಾಲೆಯನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಈ ಶಾಲೆಯಲ್ಲಿ 1 ರಿಂದ 5 ನೇ ತರಗತಿಯ ವರೆಗೆ ಒಟ್ಟು 20 ವಿದ್ಯಾರ್ಥಿಗಳಿದ್ದಾರೆ. ಇವರು ತಮ್ಮ ಕಲಾ ಮಾಧ್ಯಮದ ಮೂಲಕ ಅಲ್ಲಿನ ಪ್ರಮುಖ ಬೆಳೆಯಾದ ತೊಗರಿಬೇಳೆ ವ್ಯವಸಾಯದ ಪ್ರಕ್ರಿಯೆಯನ್ನು ಮಕ್ಕಳಿಗೆ ಪರಿಚಯಿಸುವ ಯೋಜನೆ ಕೈಗೊಂಡಿದ್ದಾರೆ.

ತೊಗರಿಬೇಳೆ ಕಲಬುರ್ಗಿಯ ಪ್ರಮುಖ ಬೆಳೆ. ಕಲಬುರ್ಗಿಯ ಆರ್ಥಿಕತೆ, ಅಲ್ಲಿನ ತೊಗರಿಬೇಳೆ ವ್ಯವಸಾಯ ಹಾಗೂ ವ್ಯಾಪಾರವನ್ನು ಅವಲಂಬಿಸಿದೆ. ತೊಗರಿ ಬೆಳೆಯೇ ಈ ಭಾಗದ ಜನರ ಜೀವನಾಡಿಯಾದುದರಿಂದ ನೃತ್ಯ, ಸಂಗೀತ, ಕತೆಗಳಲ್ಲಿ ಈ ಅಂಶವನ್ನು ಕಾಣಬಹುದು. ಪ್ರಸ್ತುತ ಯೋಜನೆಯು ತೊಗರಿಬೇಳೆ ವ್ಯವಸಾಯದ ಭೌತಿಕಗುಣ, ಪರಿಸರ, ಮಣ್ಣಿನ ಸ್ಥಿತಿ, ಕೃಷಿ ಪಂಚಾಂಗ ಹಾಗೂ ವ್ಯಾಪಾರದ ಬಗ್ಗೆ ದೃಶ್ಯಕಲೆಯ ಮೂಲಕ ಅರಿವು ಮೂಡಿಸುತ್ತದೆ. ಈ ಕಾರ್ಯಾಗಾರಗಳಲ್ಲಿ ವಿದ್ಯಾರ್ಥಿಗಳು ತೊಗರಿ ಬೆಳೆಯನ್ನು ಕೇಂದ್ರವಾಗಿರಿಸಿಕೊಂಡು ಅದರ ಸುತ್ತ ಅದಕ್ಕೆ ಸಂಬಂಧಿಸಿದ ಹಾಡು, ನೃತ್ಯ, ಕತೆಗಳನ್ನು ಕಲಿಯುತ್ತಾರೆ. ಕಾರ್ಯಾಗಾರಗಳಲ್ಲಿ ಸ್ಥಳೀಯ ರೈತರು, ಕಲಾವಿದರು, ವ್ಯಾಪಾರಿಗಳು ತಮ್ಮ ಅನುಭವ ಹಾಗೂ ಅರಿವನ್ನು ಹಂಚಿಕೊಳ್ಳುತ್ತಾರೆ. ಹೆಚ್ಚಿನ ವಿದ್ಯಾರ್ಥಿಗಳು ರೈತಾಪಿ ಕುಟುಂಬದ ಹಿನ್ನೆಲೆಯುಳ್ಳವರಾದ್ದರಿಂದ ಅವರ ಕುಟುಂಬಗಳೂ ಈ ಕಾರ್ಯಾಗಾರಗಳಲ್ಲಿ ಭಾಗವಹಿಸುತ್ತಾರೆ.

ತೊಗರಿಬೆಳೆಯ ವಿಸ್ತೃತವಾದ ಪರಿಚಯವಾದ ಮೇಲೆ, ವಿದ್ಯಾರ್ಥಿಗಳು ಚಿತ್ರಕಲೆ, ಜೇಡಿಮಣ್ಣಿನ ಕಲಾಕೃತಿಗಳ ಮೂಲಕ ಅಭಿವ್ಯಕ್ತಿ ಪಡಿಸುತ್ತಾರೆ. ಪರಿಸರದ ಬಗ್ಗೆ ಕುತೂಹಲ ತಾಳಲು ಇದು ಸಹಾಯವಾಗುತ್ತದೆ. ವಿದ್ಯಾರ್ಥಿಗಳು ತಮ್ಮ ಸುತ್ತಮುತ್ತಲಿನ ಶ್ರೀಮಂತ ನೈಸರ್ಗಿಕ ಸಂಪನ್ಮೂಲಗಳ ಬಗ್ಗೆ ತಿಳುವಳಿಕೆ ಪಡೆದು ಅದನ್ನು ರಕ್ಷಿಸುವಲ್ಲಿ ಜವಾಬ್ದಾರಿಯುತ ಪಾತ್ರವನ್ನು ವಹಿಸುತ್ತಾರೆ. ಕಲಾಕೃತಿಗಳ ಪ್ರದರ್ಶನ ಈ ಯೋಜನೆಯ ಫಲಿತ.



# ಪರಿಸರ ಅವಲೋಕಿಸಿದರೆ ಕಲಾವಿದ ಜಾಗೃತ

ಚಿತ್ತಾಪುರ ತಾಲೂಕಿನ ಪೇಠ ಶಿರೂರ ಸರಕಾರಿ ಪ್ರೌಢ ಶಾಲೆಯಲ್ಲಿ ಹಮ್ಮಿಕೊಂಡಿದ್ದ 'ತೊಗರಿ ಕಣಜ ಕಲಬುರಗಿ ಪರಿಸರ ಜ್ಞಾನ, ಚಿತ್ರಕಲೆ' ಕಾರ್ಯಾಗಾರದಲ್ಲಿ ಖ್ಯಾತ ಕಲಾವಿದ ವಿ.ಜಿ. ಅಂದಾನಿ ಮಾತನಾಡಿದರು.

**ವಿಕ ಸುದ್ದಿಲೋಕ ಕಲಬುರಗಿ**

ಪರಿಸರವನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ತಮ್ಮೊಳಗಿನ ಒಬ್ಬ ಕಲಾದ ಜಾಗೃತನಾಗುತ್ತಾನೆ ಎಂದು ಖ್ಯಾತ ಕಲಾವಿದ ಡಾ.ವಿ.ಜಿ.ಅಂದಾನಿ ಹೇಳಿದರು.

ಸಾರ್ವಜನಿಕ ಶಿಕ್ಷಣ ಇಲಾಖೆ, ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿ ಚಿತ್ತಾಪುರ ಹಾಗೂ ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್, ಬೆಂಗಳೂರು ಮತ್ತು ಚಿತ್ತಾಪುರ ತಾಲೂಕಿನ ಪೇಠ ಶಿರೂರ ಸರಕಾರಿ ಪ್ರೌಢ ಶಾಲೆ ಆಶ್ರಯದಲ್ಲಿ 'ತೊಗರಿ ಕಣಜ ಕಲಬುರಗಿ ಪರಿಸರ ಜ್ಞಾನ, ಚಿತ್ರಕಲೆ' ಕಾರ್ಯಾಗಾರ ಉದ್ಘಾಟನೆ ಕಾರ್ಯಕ್ರಮದಲ್ಲಿ ಮಾತನಾಡಿದರು. ಪ್ರತಿಯೊಬ್ಬರಲ್ಲಿ ಒಬ್ಬ ಕಲಾವಿದ ಅಡಗಿದ್ದಾನೆ. ಕುವೆಂಪು ಮತ್ತು ವಿಶ್ವೇಶ್ವರಯ್ಯ ಪ್ರಕೃತಿ ಪ್ರೀತಿಸಿ ಹೇಗೆ ದೊಡ್ಡ ಸಾಹಿತಿ ಹಾಗೂ ಎಂಜಿನಿಯರ್‌ಗಳಾದರೋ ಅದೇರೀತಿ ತಾವೂ ಈ ಹಸಿರನ್ನು ಪ್ರೀತಿಸಿದರೆ ಉತ್ತಮ ಕಲಾವಿದರಾಗಬಹುದು ಎಂದರು. ಗಣಿತದಲ್ಲಿ ತಾರ್ಕಿಕತೆಯಿದೆ, ನಿಖರತೆ ಇದೆ. ಆದರೆ, ಕಲೆಯಲ್ಲಿ ತಾರ್ಕಿಕತೆ ಎಂಬುದಿಲ್ಲ ಎಂದರು.'ದಿ ಐಡಿಯಲ್ ಫೈನ್ ಆರ್ಟ್ಸ್ ಪ್ರಾಚಾರ್ಯರಾದ ರಾಜಶೇಖರ ಎಸ್. ಮಾತನಾಡಿ, ಮಕ್ಕಳು ಮುಗ್ಧ ಮನಸ್ಸು ಹಾಗೂ ಚಿತ್ರಕಲೆಯ ವಿವಿಧ ಸ್ವರೂಪಗಳನ್ನು ಮಕ್ಕಳ ಜೊತೆ ಹಂಚಿಕೊಂಡರು. ಗಣಪತಿ ರಾಠೋಡ ಅಧ್ಯಕ್ಷೀಯ ಭಾಷಣ ಮಾಡಿದರು.

ಕಾರ್ಯಕ್ರಮದ ಸಂಚಾಲಕರಾದ ರಾಮಗಿರಿ ಪೊಲೀಸ್ ಪಾಟೀಲ್, ಸೂರ್ಯಕಾಂತ ನಂದೂರ, ಕಲಬುರಗಿ ದೃಶ್ಯಕಲಾ ವಿಭಾಗದ ಉಪನ್ಯಾಸಕ ಡಾ.ಆಕಾಶ ತಡಕಲ್ ಮತ್ತು ಡಾ. ಸತೀಶ ವಲ್ಲ್ಯಾಪುರೆ, ಪ್ರೌಢ ಶಾಲೆ ಶಿಕ್ಷಕರು, ವಿದ್ಯಾರ್ಥಿಗಳು ಭಾಗವಹಿಸಿದ್ದರು. ವಿದ್ಯಾರ್ಥಿ ಶ್ರೀಮಂತ ಪ್ರಾರ್ಥಿಸಿದರು. ಶ್ರೀರಂಗ ಜಾಧವ ಸ್ವಾಗತಿಸಿದರು. ಶಿಕ್ಷಕಿ ಸುಮಂಗಲಾ ವಂದಿಸಿದರು.

**ಸಂಕಣ್ಣವರ ಶಂಕ್ರಪ್ಪ ರಾಮಪ್ಪ**
ಜನಪದ ಕಲಾವಿದರು,
ಮುಗಳಿ, ಗದಗ
73376 97451



ಕಲಾವಿದರ ಯೋಜನೆ



# ಹಾಡ್ಯೋಣ ಲಾವಣಿ

ಶಂಕ್ರಪ್ಪ ಗದಗ ಜಿಲ್ಲೆಯ ರೈತರು ಹಾಗೂ ಜಾನಪದ ಕಲಾವಿದರು. ಜಾನಪದ ಕಲಾಪ್ರಕಾರಗಳಾದ ಭಜನೆಪದ, ತತ್ತ್ವಪದ, ಲಾವಣಿ, ಗೀಗೀಪದ, ಕೋಲಾಟ ಹಾಗೂ ದೀಪದ ನೃತ್ಯದಲ್ಲಿ ಪರಿಣಿತರು. ಅಲ್ಲಿನ ಸ್ಥಳೀಯ ಕಲೆ ಮತ್ತು ಸಂಸ್ಕೃತಿಯನ್ನು ಜೀವಂತವಾಗಿಟ್ಟುಕೊಂಡು ಬರುತ್ತಿರುವ 'ಅರುಣೋದಯ ಕಲಾ ತಂಡ'ದ ಸಕ್ರಿಯ ಸದಸ್ಯರು. ನಾಟಕ ತಂಡಗಳಲ್ಲಿ ಪಾತ್ರ ಮಾಡಿದ್ದಾರೆ. ಅದರಲ್ಲೂ ಸ್ತ್ರೀ ಪಾತ್ರಗಳಿಗೆ ಪ್ರಸಿದ್ಧರು.

ಈ ಯೋಜನೆಯು ಗದಗ ಜಿಲ್ಲೆಯ ರೋಣ ತಾಲೂಕಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಮುಗಳಿಯ 5, 6 ಮತ್ತು 7ನೇ ತರಗತಿಯ

ವಿದ್ಯಾರ್ಥಿಗಳನ್ನು ಒಳಗೊಳ್ಳುತ್ತದೆ. ಈ ಮಕ್ಕಳಿಗೆ ಲಾವಣಿ ಹಾಗೂ ಗೀಗೀಪದದ ಮೂಲಧಾಟಿಯನ್ನು ಕಲಿಸಿಕೊಡುವುದು ಈ ಯೋಜನೆಯ ಉದ್ದೇಶ.

ಈ ಯೋಜನೆಯಲ್ಲಿ ಶಂಕ್ರಪ್ಪರವರು ಲಾವಣಿ ಮತ್ತು ಗೀಗಿಪದಗಳನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಲಾವಣಿ 18 ನೆಯ ಶತಮಾನದ ಪ್ರಮುಖ ಜಾನಪದ ಕಲಾಪ್ರಕಾರ. ಸ್ಥಳೀಯ ಚರಿತ್ರೆ, ಸ್ವಾತಂತ್ರ್ಯ ಸಂಗ್ರಾಮದ ಘಟನೆಗಳನ್ನು ಲಾವಣಿಗಳಲ್ಲಿ ಹಾಡುತ್ತಿದ್ದರು. ಇತ್ತೀಚಿನ ದಿನಗಳಲ್ಲಿ ಭೂಮಿ, ಮಣ್ಣು, ಕೆರೆಗಳ ಸಂರಕ್ಷಣೆ, ಆರೋಗ್ಯದ ಬಗ್ಗೆ ಅರಿವು ಮೂಡಿಸುವ ವಸ್ತುಗಳನ್ನು ಲಾವಣಿಯಲ್ಲಿ ಹಾಡುತ್ತಾರೆ. ಗೀಗೀಪದ ಮತ್ತೊಂದು ಜಾನಪದ ಕಲಾಪ್ರಕಾರ. ನಿರ್ದಿಷ್ಟ ಲಯ ಹಾಗೂ ಧಾಟಿಯಲ್ಲಿ ಪದಗಳನ್ನು ಕಟ್ಟಿ ಹಾಡುವ ಕಲಾಪ್ರಕಾರ. ಲಾವಣಿ ಹಾಗೂ ಗೀಗೀಪದಗಳ ಮೂಲಕ ಪಠ್ಯದಲ್ಲಿರುವ ಪಾಠಗಳನ್ನು ಕಲಿಸುವ ಯೋಜನೆ ಶಂಕ್ರಪ್ಪ ಅವರದು.

ಜಾನಪದ ಕಲಾಪ್ರಕಾರಗಳ ಮೂಲಕ ಮಕ್ಕಳು ತಮ್ಮ ಪಾಠವನ್ನು ನೆನಪಿನಲ್ಲಿಟ್ಟುಕೊಳ್ಳಲು ಹಾಗೂ ಸ್ಥಳೀಯ ಕಲಾಪ್ರಕಾರಗಳೊಂದಿಗೆ ಸಂಪರ್ಕ ಸಾಧಿಸಲು ಸಹಾಯವಾಗುತ್ತದೆ. ಪಠ್ಯದಲ್ಲಿರುವ ವಸ್ತು ಮಾತ್ರವಲ್ಲದೆ, ಸ್ವಾತಂತ್ರ್ಯ ಸಂಗ್ರಾಮ ಹಾಗೂ ರಾಷ್ಟ್ರೀಯ ನಾಯಕರುಗಳಿಗೆ ಸಂಬಂಧಪಟ್ಟ ಲಾವಣಿಗಳನ್ನೂ ಕಲಿಸುತ್ತಾರೆ. ಶಾಲೆಯ ಪರಿಸರ ಹಾಗೂ ಸಮುದಾಯಗಳಲ್ಲಿ ಈ ಕಲಾಪ್ರಕಾರವನ್ನು ಜೀವಂತವಾಗಿಡುವ ಉದ್ದೇಶದಿಂದ ವಿದ್ಯಾರ್ಥಿಗಳ ಜೊತೆಗೆ ಶಿಕ್ಷಕರು ಹಾಗೂ ಪೋಷಕರಿಗೂ ಇದನ್ನು ಕಲಿಸಲಾಗುತ್ತದೆ. ಇದಲ್ಲದೇ ಲಾವಣಿ ಹಾಗೂ ಗೀಗೀಪದದ ಧಾಟಿಗೆ ತಮ್ಮದೇ ಸಾಹಿತ್ಯವನ್ನು ಬರೆದು ಹಾಡುವಲ್ಲಿ ವಿದ್ಯಾರ್ಥಿಗಳನ್ನು ಪ್ರೇರೇಪಿಸಿ, ಅದರ ಪ್ರದರ್ಶನ ನೀಡುವುದು ಈ ಯೋಜನೆಯ ಫಲಿತ.



ಕಲಾವಿದರ ಯೋಜನೆ

**ಪ್ರವೀಣ**
ರಂಗ ಕಲಾವಿದರು,
ಮೈಸೂರು.
97391 70776



# ಓದಿನ ಸುಖ!



ಮೈಸೂರಿನ ರಂಗಾಯಣದಲ್ಲಿ ಪಡೆದ ರಂಗತರಬೇತಿಯು ಪ್ರವೀಣ ಅವರಿಗೆ 'ಶಿಕ್ಷಣದಲ್ಲಿ ರಂಗಕಲೆ' ಯ ಹಲವು ಸಾಧ್ಯತೆಗಳನ್ನು ಮನಗಾಣಿಸಿತು. ಇವರು ಸಾರ್ವಜನಿಕ ಗ್ರಂಥಾಲಯದ ಬಳಕೆಯನ್ನು ಉದ್ದೇಶವಾಗಿಟ್ಟುಕೊಂಡು ತಮ್ಮ ಯೋಜನೆಯನ್ನು ರೂಪಿಸಿದ್ದಾರೆ. ಇದಕ್ಕಾಗಿ ಮೈಸೂರಿನ ಕುಕ್ಕರಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಎಂಟನೇ ತರಗತಿಯ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿಕೊಂಡಿದ್ದಾರೆ.

ಭಾಷಾ ಪಠ್ಯಗಳನ್ನೊಳಗೊಂಡಂತೆ ಶಾಲೆಯ ಪಠ್ಯಪುಸ್ತಕದ ಪ್ರತಿ ಪಾಠದ ಕೊನೆಯಲ್ಲಿ 'ಹೆಚ್ಚಿನ ಓದಿಗಾಗಿ' ಎಂಬ ಚಟುವಟಿಕೆಯ ಭಾಗ ಇರುತ್ತದೆ. ಪಠ್ಯಪುಸ್ತಕದ ಈ ಭಾಗದಲ್ಲಿ ನೀಡಲಾಗಿರುವ ಲೇಖಕರ ಮತ್ತಷ್ಟು



ಕತೆ, ಕಾದಂಬರಿ, ನಾಟಕ ಹಾಗೂ ಕಾವ್ಯವನ್ನು ಓದಲು ಪ್ರೇರೇಪಿಸುವ, ಅದಕ್ಕಾಗಿ ಸಾರ್ವಜನಿಕ ಗ್ರಂಥಾಲಯಗಳನ್ನು ಬಳಸುವ ಉದ್ದೇಶವನ್ನು ಈ ಯೋಜನೆ ಹೊಂದಿದೆ. ಪಾಠವನ್ನು ಸಂಕೀರ್ಣವಾಗಿ ಅರ್ಥೈಸಿಕೊಳ್ಳುವುದಕ್ಕೆ ಹಾಗೂ ಓದಿನ ಹವ್ಯಾಸವನ್ನು ಉತ್ತೇಜಿಸುವ ಮೂಲಕ ಸೃಜನಾತ್ಮಕ ಕಲಿಕೆಗೆ ಈ ಚಟುವಟಿಕೆ ಅನುವು ಮಾಡಿಕೊಡುತ್ತದೆ.

ಮೊದಲು ಮಕ್ಕಳನ್ನು ಗ್ರಂಥಾಲಯಕ್ಕೆ ಕರೆದುಕೊಂಡು ಹೋಗಿ, ಗ್ರಂಥಾಲಯ ಕೆಲಸ ನಿರ್ವಹಿಸುವ ಬಗೆ, ಅದರ ನೀತಿ ನಿಯಮಗಳನ್ನು ಕಾರ್ಯಾಗಾರದ ಮೂಲಕ ತಿಳಿಸುತ್ತಾರೆ. ನಂತರ ಗ್ರಂಥಾಲಯ ಬಳಸಲು ಪ್ರೇರೇಪಿಸುತ್ತಾರೆ. ಇದರ ಜತೆಗೆ, ರಂಗ ಕಾರ್ಯಾಗಾರಗಳನ್ನು ನಡೆಸುತ್ತಾರೆ. ಗ್ರಂಥಾಲಯದ ಬಳಕೆ ಮತ್ತು ಈ ಕಾರ್ಯಾಗಾರದ ಅನುಭವದ ಮೇಲೆ ರಂಗಪ್ರಯೋಗವನ್ನು ಸಿದ್ಧಪಡಿಸಿ ಪ್ರದರ್ಶಿಸುವುದು ಈ ಯೋಜನೆಯ ಫಲಿತ.

**"ಮರಳ ಗ್ರಂಥಾಲಯಕ್ಕೆ ಈ ಕಾರ್ಯಕ್ರಮದಡಿಯಲ್ಲಿ ಗ್ರಂಥಾಲಯಗಳಿಗೆ ಭೇಟಿ, ಕವಿತಾ ವಾಚನ, ಭಾಷಾ ಕೌಶಲ್ಯಗಳ ಬಳಕೆ, ಮಕ್ಕಳಿಂದಲೇ ಕಿರು ನಾಟಕ ಪ್ರದರ್ಶನ ಸಂಪನ್ಮೂಲ ವ್ಯಕ್ತಿಗಳಿಂದ ಕವನ ವಾಚನ ಎಲ್ಲಾ ಕಾರ್ಯಕ್ರಮಗಳಿಂದ ಮಕ್ಕಳಲ್ಲಿನ ಸೂಕ್ತವಾದ ಪ್ರತಿಭೆಯನ್ನು ಹೊರ ಹಾಕಲು ಹಾಗೂ ಆತ್ಮವಿಶ್ವಾಸ, ಸೃಜನಶೀಲತೆ, ಭಾಷಾ ಕೌಶಲಗಳ ಬಳಕೆ, ಮಕ್ಕಳಲ್ಲಿ ಚೆನ್ನಾಗಿ ಕಂಡುಬಂದಿದೆ." - ಬಿ.ಎನ್. ನಳಿನಾಕ್ಷಿ, ಶಿಕ್ಷಕಿ**

ಮೀತಾ ಜೈನ್
ವಾಸ್ತುಶಿಲ್ಪಿ ಹಾಗೂ ವಿನ್ಯಾಸಗಾರ್ತಿ,
ಬೆಂಗಳೂರು
98442 59076



ಕಲಾವಿದರ ಪರಿಚಯ

# ಒಂದು ಕಲ್ಯಾಣಿ ಕತೆ



ಮೀತಾ ಜೈನ್ ಬೆಂಗಳೂರಿನ ವಾಸ್ತುಶಿಲ್ಪಿ ಮತ್ತು ವಿನ್ಯಾಸಗಾರ್ತಿ. ಇವರಿಗೆ 2015 ರಲ್ಲಿ ಐ.ಎಫ್.ಎ ನೆರವು ನೀಡಿತ್ತು. ಆಗ ಚಿಕ್ಕಬಳ್ಳಾಪುರ ಜಿಲ್ಲೆ ದೇವನಹಳ್ಳಿ ತಾಲ್ಲೂಕಿನ ಸುಲ್ತಾನ್‌ಪೇಟೆ ಗ್ರಾಮದ ಸರಕಾರಿ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳ ಜತೆಗೆ ಕೆಲಸ ಮಾಡಿದ್ದರು.

ಆ ಯೋಜನೆಯಲ್ಲಿ ಬೇರೆ ಬೇರೆ ಚಟುವಟಿಕೆಗಳ ಮೂಲಕ ಆ ಗ್ರಾಮದ ಕಲ್ಯಾಣಿಯನ್ನು ಆ ವಿದ್ಯಾರ್ಥಿಗಳ ಮತ್ತು ಅಲ್ಲಿಯ ಗ್ರಾಮ ಸಮುದಾಯದ ಸಕ್ರಿಯ ಸಾಂಸ್ಕೃತಿಕ ಕೇಂದ್ರವಾಗಿಸಿದರು. ಪ್ರಸ್ತುತ ಇವರ ಯೋಜನೆ, ಅದರ ಮುಂದುವರಿಕೆಯಾಗಿದೆ. ಈಗಲೂ ಆ ಕಲ್ಯಾಣಿಯೇ ಅವರ ಚಟುವಟಿಕೆಗಳ ಕೇಂದ್ರವಾಗಿರುತ್ತದೆ. ಈ ಕಲ್ಯಾಣಿಯನ್ನು ಗ್ರಾಮ ಸಮುದಾಯದ ಕೇಂದ್ರಭಾಗಕ್ಕೆ ತರುವುದಲ್ಲದೇ ಕ್ರೀಡೆಯ ಮೂಲಕ ಅಲ್ಲಿಯ ವಿದ್ಯಾರ್ಥಿಗಳು ಮತ್ತು ವಯಸ್ಕರ ಏಕತೆಯನ್ನು ಸಾಧಿಸುವುದಾಗಿದೆ. ಈ ಕ್ರೀಡೆ ರಂಜನೀಯವಾದುದೂ, ಶೈಕ್ಷಣಿಕವಾದುದೂ ಆಗಿದ್ದು ಅವರದೇ ಆದ ಪಾರಂಪರಿಕ ನಿರ್ಮಿತಿಯ ಜತೆಗೆ ಅಲ್ಲಿಯ ಜನರ ಜತೆ ಅರ್ಥಪೂರ್ಣ ಸಂಬಂಧ ಕಲ್ಪಿಸಲು ಯತ್ನಿಸುತ್ತದೆ.

ಇದನ್ನು ಮೀತಾಜೈನ್ ಒಂದು ಅನ್ವೇಷಣಾ ವಿಧಾನದ ಮೂಲಕ ಸಾಧಿಸುತ್ತಾರೆ. ಇವರ ಯೋಜನೆಯಲ್ಲಿ ಮೂರು ಭಾಗಗಳಿವೆ. ಶಾಲೆಯ



ಅವಕಾಶ, ಮನೆ ಮತ್ತು ನೆರೆಹೊರೆ ಇವುಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಆಕೆ ಯೋಜನೆ ರೂಪಿಸಿಕೊಂಡಿದ್ದಾರೆ. ಶಾಲೆಯ ಮಕ್ಕಳು ತಮ್ಮ ಪರಿಸರದಲ್ಲಿಯೇ ದೊರೆಯುವ ಕಾಗದ, ಬಟ್ಟೆ ಮತ್ತು ಇತರೇ ವಸ್ತುಗಳನ್ನು ಬಳಸಿಕೊಂಡು ಕಥೆ ಮತ್ತು ಕಥಾನಕಗಳ ರೂಪದಲ್ಲಿ ಸಣ್ಣ ಸಣ್ಣ ಆಟಗಳನ್ನು ತರಗತಿಯ ಒಳಗೇ ಹಾಗೂ ಶಾಲಾ ಆವರಣದಲ್ಲಿ ಸೃಷ್ಟಿಸಲು ಬಯಸುತ್ತಾರೆ. ಇದರಲ್ಲಿ ದೃಶ್ಯಕಲೆ ಮತ್ತು ರಂಗಕಲೆಯಲ್ಲಿನ ನಿಪುಣರನ್ನು ಸೇರಿಸಿಕೊಳ್ಳುತ್ತಾರೆ. ಇವರು ಮಕ್ಕಳು ಕತೆ ಹೇಳುವ ಮತ್ತು ಇತರ ಚಟುವಟಿಕೆಗಳಲ್ಲಿ ನೆರವು ನೀಡುವರು.

ಈ ಪ್ರಕ್ರಿಯೆಗಳ ಮೂಲಕ ಕಲ್ಯಾಣಿಯಲ್ಲಿ ಆಡಬಹುದಾದ ದೊಡ್ಡ ಆಟವನ್ನು ಕಟ್ಟಲು ಪ್ರಯತ್ನಿಸುತ್ತಾರೆ. ಈ ಆಟ, ಆ ಜನರ ಸಂಸ್ಕೃತಿಯ ಭಾಗವಾಗಿರುತ್ತದೆ. ನೀರು ಮತ್ತು ಜೀವನಕ್ಕಿರುವ ಸೂಕ್ಷ್ಮ ಸಂಬಂಧ ಅರ್ಥ ಮಾಡಿಕೊಳ್ಳುವ ಉದ್ದೇಶ ಹೊಂದಿದೆ. ಈ ಸಾವಯವ ಸಂಬಂಧದಿಂದ ಒಂದು ಆಟ ಉದ್ಭವಿಸುವುದು ಇದರ ಉದ್ದೇಶ. ಹೀಗೆ ಹೊರಹೊಮ್ಮಿದ ಆಟದ ಮಾಲೀಕತ್ವ ಆ ಸಮಯದ್ದೇ ಆಗಬೇಕೆಂದು ಈಕೆ ಬಯಸುತ್ತಾರೆ. ಅದನ್ನು ತಮಗೆ ಇಷ್ಟಬಂದ ರೀತಿಯಲ್ಲಿ ಇದಕ್ಕೆ ಅಗತ್ಯವಾದ ಪರಿಕರವನ್ನು ನಿರ್ಮಿಸಿಕೊಂಡು ಹಾಡು ಮತ್ತು ಪ್ರದರ್ಶನದ ಮೂಲಕ ಬದಲಾಯಿಸಿಕೊಳ್ಳುವ ಅವಕಾಶವನ್ನು ಕಲ್ಪಿಸುತ್ತದೆ. ಒಂದು ವಸ್ತು ಪ್ರದರ್ಶನ ಮತ್ತು ಸಾರ್ವಜನಿಕ ಪ್ರದರ್ಶನ ಇದೆಲ್ಲದರ ಫಲಿತವಾಗಿದೆ.



**ಚಂದ್ರಪ್ಪ ಸೊಬತಿ**
ಕಲಾ ಸಂಶೋಧಕರು,
ಹಾವೇರಿ
83622 55180





# ಡೊಳ್ಳು ನಾದ ಕಲಿಕೆಯ ನಿನಾದ

ಚಂದ್ರಪ್ಪ ಸೊಬತಿಯವರು ಕರ್ನಾಟಕ ಜಾನಪದ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದಾರೆ. ತಮ್ಮ ವ್ಯಾಪಕವಾದ ಅಧ್ಯಯನ, ಸಂಶೋಧನೆ ಹಾಗೂ ದಾಖಲೀಕರಣದ ಮೂಲಕ ಕರ್ನಾಟಕದ ಜಾನಪದ ಅಧ್ಯಯನಕ್ಕೆ ಅಪಾರವಾದ ಕೊಡುಗೆ ನೀಡಿದ್ದಾರೆ. ಉತ್ತರ ಕರ್ನಾಟಕದ ಜಾನಪದ ಪ್ರಕಾರಗಳ ಅತಿ ವಿರಳ ಚಿತ್ರಗಳು, ಪ್ರಕಟಣೆಗಳ ಸಂಗ್ರಹ, ದೃಶ್ಯ ಹಾಗೂ ಶ್ರವ್ಯ ದಾಖಲೀಕರಣದ ಭಂಡಾರವನ್ನೇ ಹೊಂದಿದ್ದಾರೆ. ಕನ್ನಡದಲ್ಲಿ ಅನೇಕ ಸಂಶೋಧನಾ ಪ್ರಬಂಧ ಹಾಗೂ ಪುಸ್ತಕಗಳನ್ನು ಬರೆದಿದ್ದಾರೆ.

ಕುರಿಗಾಹಿಗಳಾದ ಹಾಲುಮತಸ್ಥರು ತಮ್ಮ ಅಧಿದೇವತೆಯಾದ

ಬೀರೇಶ್ವರನನ್ನು ಡೊಳ್ಳುಕುಣಿತದ ಮೂಲಕ ಆರಾಧಿಸುತ್ತಾರೆ. ಇದಲ್ಲದೇ ಬೇರೆ ಬೇರೆ ಸಂದರ್ಭದಲ್ಲಿ ಮನರಂಜನೆಗೂ ಡೊಳ್ಳುಕುಣಿತವನ್ನು ಪ್ರದರ್ಶಿಸುತ್ತಾರೆ. ಈ ಕಲಾಪ್ರಕಾರವನ್ನು ಚಂದ್ರಪ್ಪನವರು ಹಾವೇರಿ ಜಿಲ್ಲೆಯ ಶಿಗ್ಗಾಂವಿ ತಾಲ್ಲೂಕಿನ ಹಿರೇಮನಕಟ್ಟಿ ಸರ್ಕಾರಿ ಪ್ರೌಢಶಾಲೆಯ ಮಕ್ಕಳೊಂದಿಗೆ ಕಲಾಶಿಕ್ಷಣದ ಯೋಜನೆಯನ್ನು ಕೈಗೊಂಡಿದ್ದಾರೆ. ಈ ಯೋಜನೆಯಲ್ಲಿ ಹುಡುಗರ ಮೂರು ತಂಡಗಳು ಹಾಗು ಹುಡುಗಿಯರ ಒಂದು ತಂಡಕ್ಕೆ ಡೊಳ್ಳುಕುಣಿತ ಕಲಿಸಿ ಅದನ್ನು ಶಾಲಾ ಪಠ್ಯಕ್ರಮಕ್ಕೆ ಅಳವಡಿಸುವ ಗುರಿ ಹೊಂದಿದ್ದಾರೆ.

ಮಕ್ಕಳನ್ನು ತೀವ್ರವಾಗಿ ತೊಡಗಿಸಿಕೊಳ್ಳುವ ವಿವರವಾದ ಯೋಜನೆಯನ್ನು ಚಂದ್ರಪ್ಪರವರು ಹೊಂದಿದ್ದಾರೆ. ಮೊದಲು, ರೂಢಿಯಲ್ಲಿರುವ ಡೊಳ್ಳುಕುಣಿತದ ಅನೇಕ ಹಾಡುಗಳು ಹಾಗೂ ಪ್ರದರ್ಶನಗಳನ್ನು ವಿದ್ಯಾರ್ಥಿಗಳು ಹಾಗೂ ಶಿಕ್ಷಕರಿಗೆ ಪರಿಚಯಿಸುತ್ತಾರೆ. ಶಿಕ್ಷಕರನ್ನು ಭಾಗವಹಿಸುವ ಕಲಿಕಾರ್ಥಿಗಳನ್ನಾಗಿ ಮಾಡಿ, ಯೋಜನಾ ಅವಧಿ ಮುಗಿದ ನಂತರವೂ ಅವರನ್ನು ಸಂಪನ್ಮೂಲ ವ್ಯಕ್ತಿಗಳನ್ನಾಗಿ ಕೆಲಸವನ್ನು ಮುಂದುವರಿಸಿಕೊಂಡು ಹೋಗುವಂತೆ ಮಾಡುವುದು ಪ್ರಮುಖವಾದ ಅಂಶ. ಯೋಜನಾ ಅವಧಿಯಲ್ಲಿ ವಾರಕ್ಕೆರಡು ಬಾರಿ ವಿದ್ಯಾರ್ಥಿಗಳೊಂದಿಗೆ ಇವರು ಕೆಲಸ ಮಾಡುತ್ತಾರೆ. ಡೊಳ್ಳುಕುಣಿತದ ಸಾರ್ವಜನಿಕ ಪ್ರದರ್ಶನ ಈ ಯೋಜನೆಯ ಫಲಿತ.



ಕಲಾವಿದರ ಯೋಜನೆ

**ಮೋಹನ್ ಕುಮಾರ್**
ಜನಪದ ಕಲಾವಿದರು,
ಹಾವೇರಿ
97430 56053



# ಕೋಲಾಟವೂ ಕಲಿಕೆಯೂ



ಮೋಹನ್ ಕುಮಾರ್ ಕರ್ನಾಟಕದ ಪ್ರತಿಭಾನ್ವಿತ ಜಾನಪದ ಗಾಯಕರು. ಇವರ ಅಜ್ಜಿ ತುಮಕೂರಿನ ತುಂಬುಗನಹಳ್ಳಿಯ ಕೆಂಗಮ್ಮನವರೂ ಸುಪ್ರಸಿದ್ಧ ಜಾನಪದ ಹಾಡುಗಾರರು. ಶ್ರೀಮಂತವಾದ ಜಾನಪದ ಹಾಡುಗಾರಿಕೆ ತಮ್ಮ ಅಜ್ಜಿಯಿಂದಲೇ ಇವರಿಗೆ ಬಂದಿದೆ. ಕರ್ನಾಟಕ ಜಾನಪದ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಇವರು ಹಲವು ಸಂಸ್ಥೆಗಳಲ್ಲಿ ಪ್ರದರ್ಶನ ನೀಡಿದ್ದಾರೆ.

ಹಾವೇರಿ ಜಿಲ್ಲೆಯ ಶಿಗ್ಗಾಂವಿ ತಾಲೂಕಿನ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಹಲಸೋಗಿ ಯ 5,6,7 ನೇ ತರಗತಿಯ ಮಕ್ಕಳಿಗೆ ಸ್ಥಳೀಯ ಜಾನಪದ ಕಲಾ ಸಂಪನ್ಮೂಲಗಳನ್ನು ಬಳಸಿಕೊಂಡು

ಜಾನಪದ ಸಂಗೀತ ಹಾಗೂ ದೈಹಿಕ ಚಲನೆಯ ತಳಹದಿಯ ಮೇಲೆ ಯೋಜನೆ ಸಿದ್ಧಪಡಿಸಿದ್ದಾರೆ. ತಮ್ಮ ಯೋಜನೆಯನ್ನು ಅನುಷ್ಠಾನಗೊಳಿಸಲು ಕೋಲಾಟವನ್ನು ಗುರುತಿಸಿಕೊಂಡಿದ್ದಾರೆ. ಜಾನಪದ ಹಾಡುಗಳ ಲಯದಲ್ಲಿ ತಮ್ಮ ದೇಹವನ್ನು ಬಾಗಿಸಲು, ಬಳುಕಿಸಲು ಅದರ ಅನುಭವ ಪಡೆಯಲು ಮೊದಲು ತರಬೆತಿ ನೀಡಲಾಗುತ್ತದೆ. ಪ್ರತಿನಿತ್ಯ ಇದನ್ನು ಅಭ್ಯಾಸ ಮಾಡುವುದರಿಂದ ಒಂದು ರೀತಿಯ ದಕ್ಷತೆ, ಶಿಸ್ತು, ಚಲನೆಯ ಸೌಂದರ್ಯ ವಿದ್ಯಾರ್ಥಿಗಳ ಅನುಭವಕ್ಕೆ ಬರುತ್ತದೆ.



ಅದರೊಂದಿಗೆ ಜಾನಪದ ಕಲಾಪ್ರಕಾರಗಳನ್ನು ಅರ್ಥೈಸಿಕೊಳ್ಳುವುದಕ್ಕೆ ಸಹಾಯವಾಗುತ್ತದೆ. ನಂತರ ತಾಳ, ಲಯ ಹಾಗು ಛಂದಸ್ಸಿಗೆ ಹೊಂದಿಕೊಳ್ಳಬಹುದಾದ ಪಠ್ಯಕ್ರಮದ ಕೆಲವು ಪದ್ಯಗಳನ್ನು ಆಯ್ಕೆ ಮಾಡಿಕೊಂಡು ಕೋಲಾಟಕ್ಕೆ ಅಳವಡಿಸುತ್ತಾರೆ. ಕೋಲಾಟದ ಪ್ರದರ್ಶನ ಈ ಯೋಜನೆಯ ಫಲಿತ. ಇದರಿಂದ ಮಕ್ಕಳು, ಕಲಾವಿದರು, ಪೋಷಕ ಸಮುದಾಯ ಶಾಲೆಯೊಂದಿಗೆ ಸಂಪರ್ಕ ಸಾಧಿಸಲು ಸಾಧ್ಯವಾಗುತ್ತದೆ.





ಸವಿತಾ ಉದಯ್
ಸಂಶೋಧಕರು,
ಅಂಗಡಿಬೈಲು,
ಉತ್ತರ ಕನ್ನಡ ಜಿಲ್ಲೆ
94482 23190



ಲೇಖಕರ ಪರಿಚಯ



# ಮೌಖಿಕ ಲೋಕ

ಸವಿತಾ ಉದಯ್ ಸಂಶೋಧಕರು, ಶಿಕ್ಷಕರು, ರೈತರು ಹಾಗೂ ಜಾನಪದ ಅಧ್ಯಯನಕಾರರು. ಇವರು ಗೋಕರ್ಣದ ಸಮೀಪ ಅಂಗಡಿಬೈಲ್ ಎಂಬ ಪ್ರದೇಶದಲ್ಲಿರುವ ಹಾಲಕ್ಕಿ, ಸಿದ್ದಿ ಹಾಗೂ ಕರೆಒಕ್ಕಲು ಸಮುದಾಯದ ಕಲಾಪ್ರಕಾರಗಳ ಹಾಗೂ ಆಹಾರ ಪದ್ಧತಿಯ ಪುನಶ್ಚೇತನದ ಕೆಲಸಗಳನ್ನು ಮಾಡುತ್ತಿದ್ದಾರೆ. ಅಂಗಡಿಬೈಲಿನ ಸರ್ಕಾರಿ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳನ್ನು ಹಾಗೂ ಬುಡಕಟ್ಟು ಸಮುದಾಯದ ಸದಸ್ಯರನ್ನು ಒಳಗೊಂಡು ಪ್ರಯೋಗವನ್ನು ನಡೆಸಲಿದ್ದಾರೆ.

ಗೋಕರ್ಣ- ಅಂಕೋಲಾ ಪ್ರದೇಶದಲ್ಲಿ ನೆಲೆಸಿರುವ ಈ ಮೂರು ಸಮುದಾಯಗಳೂ ಮೌಖಿಕ ಪರಂಪರೆಯ ಹಾಡು ಹಾಗು ಕತೆಗಳ ಭಂಡಾರವನ್ನೇ ಹೊಂದಿದೆ. ಈ ಕತೆಗಳಲ್ಲಿ ಸಸ್ಯ ಹಾಗೂ ಪ್ರಾಣಿ ಸಂಕುಲ, ವ್ಯವಸಾಯ, ಆಹಾರ ಪದ್ದತಿ, ಆಚರಣೆ ಹಾಗೂ ಅಲ್ಲಿಯ ನಂಬಿಕೆಗಳ ಉಲ್ಲೇಖವಿರುತ್ತದೆ. ಈ ಹಾಡುಗಾರರು ಹಾಗೂ ಕತೆ ಹೇಳುವ ಬುಡಕಟ್ಟಿನ ಸಂಪನ್ಮೂಲವನ್ನು ಶಾಲೆಯ ಪರಿಸರಕ್ಕೆ ತರುವ

ಮೂಲಕ ತಮ್ಮದೇ ಪರಿಸರದ ಹಿನ್ನೆಲೆಯಲ್ಲಿ ಸಾಮಾಜಿಕ, ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಅರ್ಥಮಾಡಿಕೊಳ್ಳಲು ಹಾಗೂ ತರಗತಿಯ ಪಠ್ಯವನ್ನು ಜೀವನದ ಅನುಭವಗಳೊಂದಿಗೆ ಸಂಪರ್ಕ ಸಾಧಿಸಲು ಸಾಧ್ಯವಾಗುತ್ತದೆ.



ಒಂದು ವರ್ಷದ ಕಾಲ ಹಾಲಕ್ಕಿ, ಸಿದ್ದಿ, ಕರೆಒಕ್ಕಲು ಸಮುದಾಯದ ಸದಸ್ಯರು, ಶಾಲಾ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಒಂದೆಡೆ ಸೇರಿ ಜಾನಪದ ನಿರೂಪಣೆಗಳನ್ನು ದಾಖಲಿಸಿ, ವಿನಿಮಯ ಮಾಡಿಕೊಂಡು ವಿವರಣಾತ್ಮಕ ಸಚಿತ್ರಕಥಾ ಪುಸ್ತಕವನ್ನು ತಯಾರಿಸುತ್ತಾರೆ. ಜಾನಪದ ಸಮುದಾಯದ ಸದಸ್ಯರು ಶಾಲೆಯಲ್ಲಿ ಹೇಳಿದ ಕತೆಗಳನ್ನು ಶ್ರವ್ಯ ಹಾಗು ಲಿಖಿತ ಮಾಧ್ಯಮದಲ್ಲಿ ದಾಖಲೆ ಮಾಡಲಾಗುತ್ತದೆ. ಇದಲ್ಲದೇ ತಮ್ಮ ತಮ್ಮ ಮನೆಗಳಲ್ಲಿ ಪೋಷಕರು ಅಥವಾ ಹಿರಿಯರಿಂದ ಕತೆಗಳನ್ನು ಕೇಳಿಕೊಂಡು ಬರಲು ಉತ್ತೇಜಿಸಲಾಗುತ್ತದೆ. ಇದನ್ನು ಪ್ರೋತ್ಸಾಹಿಸಲು ಶಾಲೆಯಲ್ಲಿ ಕತೆ ಹೇಳುವ ಸ್ಪರ್ಧೆಗಳನ್ನು ನಡೆಸಲಾಗುತ್ತದೆ. ಈ ಕತೆಗಳನ್ನು ಸಚಿತ್ರಕತೆಯ ರೂಪದಲ್ಲಿ ಸಂಕಲನ ಮಾಡಲಾಗುತ್ತದೆ. ಇವರೊಂದಿಗೆ ಹಲವು ವರ್ಷಗಳಿಂದ ಕೆಲಸ ಮಾಡುತ್ತಿರುವ ದೃಶ್ಯ ಕಲಾವಿದೆ ಅಂತರಾ ಮುಖರ್ಜಿ ಈ ಸಚಿತ್ರ ಪುಸ್ತಕ ತಯಾರಿಸಲು ಸಂಪನ್ಮೂಲ ವ್ಯಕ್ತಿಯಾಗಿ ಕಾರ್ಯ ನಿರ್ವಹಿಸುತ್ತಾರೆ.



**ಶಿಕ್ಷಕರು ಮತ್ತು ಕಲಾವಿದರಿಗೆ ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್ ಸಂಸ್ಥೆಯು ಕಲಾ ಸಂಯೋಜಿತ ಪ್ರಯೋಗಗಳಿಗೆ ಅನುದಾನವನ್ನು ನೀಡುತ್ತಾ ಬಂದಿರುವುದನ್ನು ಸಕಾರಾತ್ಮಕವಾಗಿ ಸ್ಪಂದಿಸಿದ ಟಾ ಟಾ (ಎ ಐ ಜಿ ) ಸಂಸ್ಥೆಯವರು ಸರಕಾರಿಯೇತರ ವ್ಯವಸ್ಥೆಯ ಎರಡು ಶೈಕ್ಷಣಿಕ ಸಂಸ್ಥೆಗಳಿಗೆ ಅನುದಾನವನ್ನು ನೀಡಲು ಆಸಕ್ತಿಯನ್ನು ತೋರಿಸಿದರು. ಸಾಂಘಿಕವಾಗಿ ಇಡೀ ಶಾಲೆಯೇ ಕಲಾ ಅಂತರ್ಗತ ಕಲಿಕೆಯ ಚಟುವಟಿಕೆಗಳಲ್ಲಿ ಭಾಗವಹಿಸುವುದನ್ನು ಪ್ರೋತ್ಸಾಹಿಸಬೇಕೆನ್ನುವುದು ಅವರ ಯೋಚನೆಯಾಗಿತ್ತು. ಸಂಸ್ಥೆಗಳ ಹುಡುಕಾಟದಲ್ಲಿದ್ದ ಸಂದರ್ಭದಲ್ಲಿ ನಮಗೆ ಮೆಚ್ಚುಗೆಯಾಗಿದ್ದು ಸಾಗರದ 'ಹೊಂಗಿರಣ ಸ್ಕೂಲ್ ಆಫ್ ಎಕ್ಸಲೆನ್ಸ್' ಮತ್ತು ಕುಂದಾಪುರದ 'ನಮ್ಮ ನಳಂದ ಶಾಲೆ' ಗಳ ವಿದ್ಯಾರ್ಥಿ ಕೇಂದ್ರೀಕೃತ ಯೋಚನೆಗಳು. ಈ ಸಂಸ್ಥೆಗಳನ್ನು ಪ್ರೋತ್ಸಾಹಿಸುವಲ್ಲಿ ಐ ಎಫ್ ಎ ಸಂಸ್ಥೆಯು ಶಾಲೆಗಳ ಎಲ್ಲ ಸ್ತರದ ಪ್ರತಿನಿಧಿಗಳಿಗೆ ತರಬೇತಿಯನ್ನು ಸಹ ನೀಡಿತು. ಇಂತಹದೊಂದು ಪ್ರಯತ್ನದ ಫಲಿತಾಂಶಗಳೇ ಸಮಗ್ರ 2 ಮತ್ತು 3 ಹಾಗು ನಶಿಸಿ ಹೋಗುತ್ತಿರುವ ಪಾಣಾರಾಟವನ್ನು ಆ ಸಮುದಾಯದ ಮೂಲಕ ಶಾಲೆಯ ಒಳಗೆ ತಂದುದರ ತೃಪ್ತಿ.**

ಸಂಸ್ಥೆ ಪರಿಚಯ

# ಹೊಂಗಿರಣದ ಬೆಳಕು

ಶಾಲೆ ಎಂಬ ತೋಟದಲ್ಲಿ ಮಕ್ಕಳು ಹೂಗಳಂತೆ ಅರಳಿ ನಲಿಯುತ್ತ ಕಲಿಯುತ್ತಿರಬೇಕು. ಮಗುವಿಗೆ ಅತ್ಯಂತ ಆಪ್ತವೆನಿಸುವ ಮನೆಯ ವಾತಾವರಣವನ್ನೇ ಶಾಲೆಯಲ್ಲಿ ನಿರ್ಮಾಣ ಮಾಡಬೇಕು. ವಿದ್ಯಾರ್ಥಿಗಳಲ್ಲಿ ಅಭಿಪ್ರೇರಣೆ, ಚಿಂತನೆ, ಮಾನವೀಯತೆ, ಸಾಮಾಜಿಕ ಮೌಲ್ಯಗಳನ್ನು ಬೆಳೆಸುವಂತಹ ಮಹತ್ವಾಕಾಂಕ್ಷೆಯನ್ನು ಇಟ್ಟುಕೊಂಡು ಸ್ಥಾಪಿತವಾದ ಸಂಸ್ಥೆಯೇ ಶಿವಮೊಗ್ಗ ಜಿಲ್ಲೆಯ, ಸಾಗರ ತಾಲ್ಲೂಕಿನ ಅಮ್ಮೆಕೊಪ್ಪದ "ಹೊಂಗಿರಣ ಸ್ಕೂಲ್ ಆಫ್ ಎಕ್ಸಲನ್ಸ್".

ಚಿಕ್ಕ ಮಕ್ಕಳು ಅಂದರೆ 3ನೇ ತರಗತಿವರೆಗಿನ ಮಕ್ಕಳು ಎಲ್ಲವನ್ನೂ ಇಡಿಯಾಗಿ ನೋಡುತ್ತಾರೆ. ಅವರಿಗೆ ಕನ್ನಡ, ವಿಜ್ಞಾನ, ಗಣಿತ, ಪರಿಸರ ವಿಜ್ಞಾನ ಮುಂತಾದ ವಿಷಯಗಳಿಗೆ ಸಂಬಂಧಿಸಿದ್ದು ಎನ್ನುವ ಅರಿವು ಇರುವುದಿಲ್ಲ. ಅಂತಹ ಸಂದರ್ಭದಲ್ಲಿ ನಾವು ಶಾಲೆಯಲ್ಲಿ ಎಲ್ಲ ವಿಷಯಗಳನ್ನೂ ಸಮಗ್ರವಾಗಿ ಚಟುವಟಿಕೆ ಆಧಾರಿತವಾಗಿ ಕಲಿಸಲು ಸಾಧ್ಯವೆಂಬುದನ್ನು ಹೊಂಗಿರಣ




ಶಾಲೆಯವರು ಸಂಯೋಜಿತ 'ಸಮಗ್ರ 2' ಮತ್ತು 'ಸಮಗ್ರ 3' ಪಠ್ಯಪುಸ್ತಕಗಳನ್ನು ರೂಪಿಸಿದ್ದಾರೆ. ಇವರು ಕೈಗೊಂಡ ಈ ಪ್ರಯೋಗವು ಅದ್ಭುತವಾದದ್ದು ಮತ್ತು ಶ್ರಮದಾಯಕವೂ ಆಗಿದೆ. ತರಗತಿಯ ಎಲ್ಲಾ ವಿಷಯಗಳ ಗುರಿ, ಉದ್ದೇಶ, ಮತ್ತು ಸಾಮರ್ಥ್ಯಗಳನ್ನು ಕ್ರೋಢಿಕರಿಸಿ, ಅವುಗಳಲ್ಲಿ ಒಂದೇಯಾಗಿರುವ ಸಾಮರ್ಥ್ಯ, ಉದ್ದೇಶವಿರುವ ಪಾಠಗಳನ್ನು ಒಂದೆಡೆ ಸೇರಿಸಿ ಕಲಿಕೆ ಇಮ್ಮಡಿಯಾಗುವಂತೆ ಪಠ್ಯಪುಸ್ತಕ ರಚನೆ ಮಾಡಿದ್ದಾರೆ. ಒಂದು ಪಾಠವನ್ನು ಯಾರು, ಹೇಗೆ ಕಲಿಸಬೇಕೆಂಬುದೂ ಇಲ್ಲಿ ಬಹಳ ಮುಖ್ಯವಾಗುತ್ತದೆ. ಉದಾ: 'ಕಾಲ' ಪಾಠವನ್ನು ಕನ್ನಡ, ಇಂಗ್ಲೀಷ, ಗಣಿತ, ವಿಜ್ಞಾನ, ಸಂಗೀತ, ದೈಹಿಕ ಶಿಕ್ಷಣ ವಿಷಯಗಳಾಗಿ ಏನನ್ನು, ಎಷ್ಟನ್ನು ಬೋಧಿಸಬೇಕೆಂಬುದನ್ನು ಗೊಂದಲವಿಲ್ಲದಂತೆ 'ಸಮಗ್ರ'ವನ್ನು ತಯಾರಿಸಿದ್ದಾರೆ. ಪ್ರಾಂಶುಪಾಲರಾದ ಕೆ. ಶೋಭಾ ಅವರ ನೇತೃತ್ವದ ಶಿಕ್ಷಕರ ತಂಡ ತಮ್ಮ ಶಾಲೆಯಲ್ಲಿ ಕೈಗೊಂಡ ಈ ವಿಭಿನ್ನ ಪ್ರಯೋಗ ಶಿಕ್ಷಣ ಕ್ಷೇತ್ರಕ್ಕೇ ಒಂದು ಹೊಸ ಆಯಾಮವನ್ನು ನೀಡಿದೆ ಎನ್ನಬಹುದು.

ಮಗು ವಿಭಿನ್ನ ಚಟುವಟಿಕೆಗಳ ಮೂಲಕ ಕಲಿಕೆಗೆ ಹಾತೊರೆದು ಜ್ಞಾನವನ್ನು ತನ್ನದಾಗಿಸಿಕೊಳ್ಳುವಂತಾಗಬೇಕು. ಈ ಮೂಲಕ 21ನೇ ಶತಮಾನಕ್ಕೆ ವಿದ್ಯಾರ್ಥಿಗಳನ್ನು ನಿರ್ಮಾಣ ಮಾಡುವ ಕಾಯಕದಲ್ಲಿ ಇವರು ತೊಡಗಿಕೊಂಡಿರುವುದು ಸ್ತುತ್ಯಾರ್ಹವಾಗಿದೆ.





# ಪಾಣರಾಟದ ಪಾಠ

ಸಂಸ್ಥಾ ಯೋಜನೆ

ಕರಾವಳಿ ಜಿಲ್ಲೆಯಾದ ಉಡುಪಿ ಜಿಲ್ಲೆಯ ಸಾಂಸ್ಕೃತಿಕ ಸೊಗಡನ್ನು ಬಿಂಬಿಸುವ ತುಳು ಸಂಸ್ಕೃತಿಯಿಂದ ಅಭಿವ್ಯಕ್ತಗೊಂಡಿರುವ ಕಲೆಯೇ "ಭೂತಾರಾಧನೆ". ಕರಾವಳಿಯಲ್ಲಿ ನಡೆಸುವ ಪಾಣ ಜನಾಂಗದವರು ಮಾತ್ರ ನಡೆಸುವ ಈ ಆಟವನ್ನು 'ಪಾಣರಾಟ'ವೆಂತಲೂ ಕರೆಯುತ್ತಾರೆ. ಇಂತಹದೊಂದು ವಿಶಿಷ್ಟಪೂರ್ಣವಾದ ಕಲಾ ಪರಂಪರೆಯನ್ನು ಶಾಲೆಯಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ ಕಲಿಸುವ ಪ್ರಯತ್ನವನ್ನು ಉಡುಪಿ ಜಿಲ್ಲೆಯ ನಳಂದಾ ವಿದ್ಯಾಪೀಠ ಹಟ್ಟಿಯಂಗಡಿಯಲ್ಲಿ ಹಮ್ಮಿಕೊಳ್ಳಲಾಗಿದೆ.

ಪಾಣರಾಟ ದೈವವನ್ನು ವರ್ಣಿಸುವ ಹಾಡುಗಳ ಮೂಲಕ ಕುಣಿಯುವ ಕಲೆಯಾಗಿದ್ದು ಪ್ರಸ್ತುತ ನಶಿಸುವ ಹಂತವನ್ನು ತಲುಪಿದೆ. ಇಂತಹ ವಿಶಿಷ್ಟವಾದ ಕಲಾ ಪರಂಪರೆಯನ್ನು ನಮ್ಮ ಶಾಲಾ ಕೋಣೆಗೆ ತರುವಲ್ಲಿ ಮತ್ತು ಅದನ್ನು ಹೇಗೆ ತಲುಪಿಸಬೇಕು ಎನ್ನುವ ಆಲೋಚನೆಯಲ್ಲಿ 'ನಮ್ಮ ನಳಂದ' ಅದ್ಭುತವಾದ ಕಾರ್ಯ ಮಾಡಿದೆ. ಮಕ್ಕಳು ಪಾಣರಾಟದ ಸಂಗೀತ ಮತ್ತು ನೃತ್ಯದಲ್ಲಿ ಆಸಕ್ತಿ ಹೊಂದುವುದರ ಜೊತೆಗೆ ಅಲ್ಲಿಯ ಸಾಹಿತ್ಯವನ್ನೂ ಅರಿಯಲು ಸಾಧ್ಯವಾಗಿದೆ.



ಇಂತಹ ವಿಭಿನ್ನ ಪ್ರಯತ್ನಗಳನ್ನು ನಡೆಸಿದ ನಳಂದಾ ವಿದ್ಯಾಪೀಠ ಶಾಲೆಯ ವಿದ್ಯಾರ್ಥಿಗಳು ಈ ರೀತಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. 'ಪಾಣರಾಟ'ವು ನಮ್ಮ ನೆಲದ ಜಾನಪದ ಕಲೆ. ಇದು ಮೂಲತ: ನಮ್ಮ ಕರಾವಳಿ ಶೈಲಿಯಾಗಿದ್ದು, ದೈವಾರಾಧನೆ ಒಂದು ಧಾರ್ಮಿಕ ಆಚರಣೆಯಾಗಿದೆ. ನಾಗರಾಜ ಪಾಣರು ನಿರಂತರ ತರಬೇತಿಯನ್ನು ನೀಡಿ ನಮ್ಮನ್ನು ಸಜ್ಜುಗೊಳಿಸಿದ್ದಾರೆ. ಅವರ ಮಾರ್ಗದರ್ಶನದಲ್ಲಿ ಈ ಪಾಣರಾಟ ಎಂಬ ಸಾಂಸ್ಕೃತಿಕ ಕಲೆಯನ್ನು ಆಸಕ್ತಿಯಿಂದ ಕಲಿತಿದ್ದೇವೆ. ಯಾವ ಯಾವ ದೈವ, ಕೋಲಕ್ಕೆ ಯಾವ ರೀತಿಯ ಬಣ್ಣ ಲೇಪನ ಮಾಡಿಕೊಳ್ಳಬೇಕು, ಲಯಬದ್ಧವಾಗಿ ಹಾಡಬೇಕು ಎನ್ನುವುದನ್ನು ಕಲಿತಿದ್ದೇವೆ. ಈ ಪಾಣರಾಟದ ಕಲೆಯನ್ನು ಕಲಿಸಿಕೊಟ್ಟ ಶ್ರೀ ನಾಗರಾಜ ಪಾಣರು ಹಾಗೂ ಅವರ ಸಂಗಡಿಗರಿಗೂ ನಾವೆಲ್ಲ ವಿದ್ಯಾರ್ಥಿಗಳು ಕೃತಜ್ಞತೆಯನ್ನು ಸಲ್ಲಿಸುತ್ತೇವೆ" ಎಂದರು.



**ಪ್ರಜ್ಞಾ ಹೆಗಡೆ**
ನಾಟಕ ಶಿಕ್ಷಕಿ,
ಸ.ಪ್ರೌ.ಶಾಲೆ, ಮಂತಗಿ,
ಹಾನಗಲ್ ತಾ., ಹಾವೇರಿ ಜಿ.
94824 68726



ಯಶೋಗಾಥೆ

# ಸನ್ನಾಟದ ಸಂಗದಲ್ಲಿ

2013–14ರ ಶಿಕ್ಷಕರ ಅನುದಾನವನ್ನು ಪಡೆದಿರುವ ಪ್ರಜ್ಞಾ ಹೆಗಡೆ ಸರಕಾರಿ ಪ್ರೌಢಶಾಲೆ ಮಂತಗಿ ಹಾನಗಲ್ಲ ತಾಲೂಕು, ಹಾವೇರಿ ಜಿಲ್ಲೆಯಲ್ಲಿ ನಾಟಕದ ಶಿಕ್ಷಕಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಅವರು ತಮ್ಮ ಮಕ್ಕಳೊಂದಿಗೆ ಹೊಸ ಕಲಿಕೆಯಲ್ಲಿ ತೊಡಗಿಕೊಂಡಿದ್ದಾರೆ. ಸ್ಥಳೀಯ ಕಲಾ ಪ್ರಕಾರಗಳನ್ನು ಪಠ್ಯಕ್ರಮದೊಂದಿಗೆ ಸಮ್ಮಿಳಿಸಿಕೊಂಡು ಬೋಧನೆಯಲ್ಲಿ ಕಾರ್ಯಪ್ರವೃತ್ತರಾಗಿದ್ದಾರೆ. ಪ್ರಜ್ಞಾ ಒಬ್ಬ ನಾಟಕ ಶಿಕ್ಷಕಿಯಾಗಿ ತನ್ನ ಶಾಲಾ ವಾತಾವರಣವನ್ನೇ ಚೈತನ್ಯಮಯಗೊಳಿಸಿದ್ದಾರೆ. ಸೃಜನಶೀಲತೆಯನ್ನು



ಮೈಗೂಡಿಸಿಕೊಂಡಿರುವ ಪ್ರಜ್ಞಾ ಪಠ್ಯದಲ್ಲಿನ ವಿಷಯಾಂಶಗಳನ್ನು ವಿದ್ಯಾರ್ಥಿಗಳಿಗೆ ಸುಲಭವಾಗಿ ಅರ್ಥೈಸಲು ಸ್ಥಳೀಯ ಕಲಾ ಪ್ರಕಾರವಾದ 'ಸಣ್ಣಾಟ'ವನ್ನು ಆಯ್ದುಕೊಂಡು ಪ್ರಯೋಗಗಳನ್ನು ನಡೆಸಿದರು.



ಮೌಖಿಕ ಪರಂಪರೆಯಲ್ಲಿರುವ ಸಣ್ಣಾಟದ ಕೆಲ ಸಂಭಾಷಣೆಗಳನ್ನು, ಧ್ವನಿಯ ಏರಿಳಿತ, ಹಾಡುಗಾರಿಕೆ, ವಾದ್ಯಗಳನ್ನು ನುಡಿಸುವುದು ಮುಂತಾದವುಗಳನ್ನು ಕಾರ್ಯಾಗಾರಗಳ ಮೂಲಕ ವಿದ್ಯಾರ್ಥಿಗಳು ಕಲಿತರು. ನಾಟಕದ ಶಿಕ್ಷಕಿಯಾಗಿ ಇವರು ಮಾಡುವಂತ ಕೆಲಸಗಳಿಗೆ ಪೋಷಕರು ಅಂದು ಸಹಕಾರ ನೀಡಿದರು. ಒಟ್ಟಿನಲ್ಲಿ ಮಕ್ಕಳು ಲವಲವಿಕೆಯಿಂದ ಸ್ಥಳೀಯ ಕಲಾಪ್ರಕಾರವಾದ ಸಣ್ಣಾಟವನ್ನು ಕಲಿತರು.



**ಶಿವನಾಯಕ ದೊರೆ**
ನಾಟಕ ಶಿಕ್ಷಕರು,
ಸ.ಪ್ರೌ.ಶಾಲೆ, ಬಡೆಲಡಕು,
ಕೂಡ್ಲಗಿ ತಾ. ಬಳ್ಳಾರಿ ಜಿ.
99801 89001



ಯಕ್ಷಗಾನ




# ಇದು ಮಕ್ಕಳ ಜಾತ್ರೆ

ಈ 'ಜಾತ್ರಾ' ಯೋಜನೆಯನ್ನು ನಾಟಕ ಶಿಕ್ಷಕರಾದ ಶಿವನಾಯಕ ದೊರೆ ಅವರು ಬಳ್ಳಾರಿ ಜಿಲ್ಲೆ ಕೂಡ್ಲಗಿ ತಾಲೂಕಿನ ಬಡೆಲಡಕು ಸರಕಾರಿ ಪ್ರೌಢಶಾಲೆಯಲ್ಲಿ ಏರ್ಪಡಿಸಿದ್ದರು.

ಭಾರತ ಬಹುಸಂಸ್ಕೃತಿಯ ವಿಭಿನ್ನ ಆಚರಣೆಗಳನ್ನು ಹೊಂದಿರುವ ದೇಶವಾಗಿದೆ. ಇಲ್ಲಿ ಆಚರಿಸುವ 'ಜಾತ್ರೆಗಳು' ದೇವರ ಉತ್ಸವ ಅಷ್ಟೇ ಆಗಿರುವುದಿಲ್ಲ. ಅಂತಹ ವೈವಿಧ್ಯಮಯ ಜಾತ್ರೆಗಳನ್ನು ವಿದ್ಯಾರ್ಥಿಗಳಿಗೆ ಪರಿಚಯಿಸುವುದರ ಜೊತೆಗೆ ಪರಿಶೋಧಿಸುವ, ಇತಿಹಾಸ ಅರಿಯುವ, ಆಹಾರ, ಗೊಂಬೆಗಳು, ಜಾನಪದ ಸಂಗೀತ,



ಹಾಗೂ ನೃತ್ಯಗಳನ್ನು ಪರಿಚಯಿಸುವ ಶಿವನಾಯಕ ದೊರೆಯವರ ಯೋಜನೆ ವಿಶಿಷ್ಟವೆನಿಸುತ್ತದೆ.

ವಿದ್ಯಾರ್ಥಿಗಳೊಂದಿಗೆ ಜಾತ್ರೆಗಳಲ್ಲಿ ಭಾಗವಹಿಸಿ ವೀಕ್ಷಿಸಿ ಅಲ್ಲಿಯ ಚಟುವಟಿಕೆಗಳನ್ನು ಕಣ್ಣಾರೆ ಕಾಣುವದು ಮತ್ತು ನಾವು ಅದನ್ನು ಶಾಲಾ ವಾತಾವರಣದಲ್ಲಿ ಮರುಸೃಷ್ಟಿಸುವ ಕಾರ್ಯವನ್ನು ಮಾಡಿದ್ದು ಅದ್ಭುತವೆನಿಸಿತು. ಈ ಮೂಲಕ ವಿದ್ಯಾರ್ಥಿಗಳಲ್ಲಿ ವಿವೇಚನಾಶಕ್ತಿ ವೃದ್ಧಿಸುವ ಕಾರ್ಯವನ್ನು ಮಾಡಿದ್ದಾರೆ. 2015–16 ರ ಅನುದಾನವನ್ನು ಪಡೆದ ಶಿವನಾಯಕ ದೊರೆ ಅವರು ಸ್ಥಳೀಯ ಸಮುದಾಯದವರ ಸಹಾಯದಿಂದ ಈ ಯೋಜನೆಯ ಕೊನೆಯಲ್ಲಿ 'ಜಾತ್ರೆಯನ್ನೇ' ನಿರ್ಮಿಸಿ ಪ್ರದರ್ಶಿಸಿದ್ದು ವಿದ್ಯಾರ್ಥಿಗಳ ಸ್ಮರಣೆಯಲ್ಲಿ ಅಚ್ಚಳಿಯದೆ ಉಳಿಯಿತೆನ್ನಬಹುದು.



ವೆಂಕಟೇಶ ಜಿ. ನಾಯ್ಕ
ಸಿ.ಆರ್.ಪಿ. ಮಾಗೋಡ,
ಹೊನ್ನಾವರ ತಾ. ಉತ್ತರ ಕನ್ನಡ ಜಿ.
94832 83211



ಯಕ್ಷಗಾನ

# ಯಕ್ಷಲೋಕ



ನಮ್ಮ ರಾಜ್ಯದ ಪ್ರಮುಖ ಜಾನಪದ ಕಲೆ ಯಕ್ಷಗಾನ. ಕರಾವಳಿ ಭಾಗದಲ್ಲಂತೂ ಯಕ್ಷಗಾನದ ಪ್ರಭಾವಕ್ಕೊಳಗಾಗದವರೇ ಇಲ್ಲವೆನ್ನಬಹುದು. ಈ ಯಕ್ಷಗಾನ ಕಲಾ ಪ್ರಕಾರವನ್ನು ಶಾಲಾ ಕೋಣೆಗೆ ತರುವ ಮೂಲಕ ವಿದ್ಯಾರ್ಥಿಗಳ ಕಲಿಕೆಯಲ್ಲಿ ಆಸಕ್ತಿ ಮೂಡುವಂತೆ ಮಾಡಿದ್ದಾರೆ ವೆಂಕಟೇಶ ನಾಯ್ಕ ಅವರು. 2015–16ರ ಅನುದಾನವನ್ನು ಪಡೆದ ಇವರು ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲೂಕಿನ ಮಾಗೋಡ ಸಮೂಹ ಸಂಪನ್ಮೂಲ ವ್ಯಕ್ತಿಗಳು.



ಸ್ಥಳೀಯ ಜಾನಪದ ಕಲೆ ಯಕ್ಷಗಾನದ ಮೂಲಕ ಪಠ್ಯದ ಹಲವಾರು ವಿಷಯಾಂಶಗಳನ್ನು ಕಾರ್ಯಾಗಾರಗಳ ಮೂಲಕ ಕಲಿಸುವ ಪ್ರಯತ್ನ ಮಾಡಿದ್ದಾರೆ. ಅನುಭವಿ ಯಕ್ಷಗಾನ ಕಲಾವಿದರಿಂದ ವಿದ್ಯಾರ್ಥಿಗಳನ್ನು ತರಬೇತಿಗೊಳಿಸಿದ್ದಾರೆ. ಧ್ವನಿಯ ಏರಿಳಿತ, ಮಾತುಗಾರಿಕೆ, ಸ್ಪಷ್ಟತೆ ಮತ್ತು ಹಾವಭಾವಗಳನ್ನು ಬಳಸುವ ಕೌಶಲಗಳನ್ನು ಕಲಿಯಲು ಪ್ರಯತ್ನಿಸಿದ್ದಾರೆ. ವೆಂಕಟೇಶರವರು ಅಂತಿಮ ಪ್ರದರ್ಶನದಲ್ಲಿ ಮಕ್ಕಳು ವೇಷ ತೊಟ್ಟು ಹೆಜ್ಜೆ ಹಾಕಿದ ಸಂದರ್ಭವನ್ನು ಸದಾ ನೆನೆಯುತ್ತಾರೆ. ವಿದ್ಯಾರ್ಥಿಗಳು ನಿರರ್ಗಳವಾಗಿ, ಭಾಷಾ ಸ್ಪಷ್ಟತೆಯೊಂದಿಗೆ ಆಸ್ವಾದಿಸಿ ಅಭಿನಯಿಸಿದ್ದು ನಾವೆಲ್ಲ ಮೆಚ್ಚುವಂತಹದ್ದಾಗಿದೆ.



ಗುಂಡಪ್ಪ ಗೌಡಗೋಳ
ಕಲಾ ಶಿಕ್ಷಕರು,
ಸ.ಪ್ರೌ.ಶಾಲೆ, ಹಳ್ಳಿಖೇಡ (ಬಿ)
ಹುಮನಾಬಾದ ತಾ. ಬೀದರ್ ಜಿ.
86180 62772



ಯಶೋಗಾಥೆ

# ಕಲಾಯಣ





ಗುಂಡಪ್ಪ ಗೌಡಗೋಳ ಅವರು ಅತ್ಯುತ್ತಮ ಚಿತ್ರಕಲಾ ಶಿಕ್ಷಕರು. ಇವರು ಸರಕಾರಿ ಪ್ರೌಢ ಶಾಲೆ ಹಳ್ಳಿಖೇಡ, ಹುಮನಬಾದ ತಾಲೂಕಿನ ಬೀದರ್ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಚಿತ್ರ ಕಲೆಯ ಎಲ್ಲಾ ಪ್ರಕಾರಗಳಲ್ಲಿ ಕೌಶಲ್ಯವನ್ನು ಹೊಂದಿರುವ ಇವರು ಬೀದರ್ ಸುತ್ತಲಿನ ಪ್ರದೇಶಗಳಲ್ಲಿ ಸೃಜನಶೀಲ ಕಲಾವಿದರೆಂದು ಗುರುತಿಸಿಕೊಂಡಿರುತ್ತಾರೆ. ಪ್ರಯೋಗದ ಅವಧಿಯಲ್ಲಿ ಗುಂಡಪ್ಪನವರು ತಮ್ಮ ಶಾಲಾ ವಿದ್ಯಾರ್ಥಿಗಳಿಗೆ ದೃಶ್ಯ ಮಾಧ್ಯಮದ ವಿಶೇಷತೆಗಳನ್ನು ಮತ್ತು  ಬೀದರ್ ಮತ್ತು ಕಲಬುರ್ಗಿಯ ಐತಿಹಾಸಿಕ ಸ್ಥಳಗಳಿಗೆ ಭೇಟಿ ಮಾಡುವುದರ ಮೂಲಕ, ಇತಿಹಾಸದೊಂದಿಗೆ ದೃಶ್ಯಕಲೆಯನ್ನು ಸಮ್ಮಿಳಿಸಿ ಕಲಿಸುವ ಪ್ರಯತ್ನವನ್ನು ನಡೆಸಿದರು.

ವಿದ್ಯಾರ್ಥಿಗಳಿಗೆ ಪ್ರತ್ಯಕ್ಷವಾಗಿ ಅಲ್ಲಿಯ ಸೂಕ್ಷ್ಮತೆಯನ್ನು ಅರಿಯುವ ಶಿಲ್ಪಕಲೆಯ ಹೊಸ ಪರಿಕಲ್ಪನೆಗಳನ್ನು ಅರಿಯಲು ಇವರ ಯೋಜನೆ ಬಹಳಷ್ಟು ಸಹಕಾರಿಯಾಗಿದೆ. ಅಷ್ಟೇ ಅಲ್ಲದೆ ವಿದ್ಯಾರ್ಥಿಗಳು ಚಿತ್ರಿಸಿದ ಕಲೆಯನ್ನು ಇತರ ಶಾಲೆಗಳ ಮಕ್ಕಳು ವೀಕ್ಷಿಸಲು ಅವಕಾಶ ನೀಡಿದ್ದಾರೆ. ಇದರಿಂದ ಇತರ ಶಾಲಾ ವಿದ್ಯಾರ್ಥಿಗಳಿಗೂ ಕಲೆಯ ಅಭಿರುಚಿಯನ್ನು ಹಚ್ಚಿಸಿದ್ದಾರೆ. ಐತಿಹಾಸಿಕ ಪ್ರದೇಶಗಳ ಸಂರಕ್ಷಣೆ, ಮಹತ್ವವನ್ನು ಈ ಮೂಲಕ ವಿದ್ಯಾರ್ಥಿಗಳಿಗೆ ತಿಳಿಸುತ್ತಿರುವುದು ಮೆಚ್ಚುಗೆಯ ಕಾರ್ಯವಾಗಿದೆ.



**ಶಾಂತಾಮಣಿ**
ನಾಟಕ ಶಿಕ್ಷಕಿ,
ಸ.ಪ್ರೌ.ಶಾಲೆ, ಮೂಡಲಕೊಪ್ಪಲು,
ಪಾಂಡವಪುರ ತಾ. ಮಂಡ್ಯ ಜಿ.
94499 96729



ಯಶೋಗಾಥೆ

# ರಂಗಪಯಣ



2014–15ರ ಅನುದಾನ ಪಡೆದ ಶಾಂತಾಮಣಿಯವರು ಮಂಡ್ಯ ಜಿಲ್ಲೆಯ ಪಾಂಡವಪುರದ ಮೂಡಲಕೊಪ್ಪಲು ಸರಕಾರಿ ಪ್ರೌಢ ಶಾಲೆಯಲ್ಲಿ ನಾಟಕ ಶಿಕ್ಷಕಿಯಾಗಿದ್ದರು.

ರಂಗಕಲೆ ಶಿಕ್ಷಣದ ಅವಿಭಾಜ್ಯ ಅಂಗವಾಗಿದೆ. ರಂಗಕಲೆಯಿಲ್ಲದೆ ಶಿಕ್ಷಣ ಪರಿಪೂರ್ಣವಾಗಲಾರದು. ಅದನ್ನು ಪುಷ್ಠಿಕರಿಸುವಂತಿದೆ ಶಾಂತಾಮಣಿಯವರ ಪ್ರಯೋಗ. ಪ್ರಾರಂಭದಲ್ಲಿ ಇವರು ಇನ್ನಿತರ ತನ್ನ ನಾಟಕದ ಗೆಳೆಯರು, ನಿರ್ದೇಶಕರುಗಳನ್ನು ಸೇರಿಸಿಕೊಂಡು ನಾಟಕಕ್ಕೆ ಅಳವಡಿಸಬಹುದಾದ ಪಠ್ಯದ ಅಧ್ಯಾಯಗಳನ್ನು ಆಯ್ಕೆ ಮಾಡಿಕೊಂಡರು. ಅವುಗಳಿಗೆ ಜೀವ ತುಂಬಿದರು. ಸಮೂಹ ವ್ಯಾಪ್ತಿಗೆ ಬರುವ ಇನ್ನು ಮೂರು ಶಾಲೆಗಳನ್ನು ಗುರ್ತಿಸಿ ಹಲವಾರು ಕಾರ್ಯಾಗಾರಗಳನ್ನು ಅನೇಕ ನುರಿತ ಸಂಪನ್ಮೂಲ ವ್ಯಕ್ತಿಗಳ ಸಹಕಾರದಿಂದ ಹಮ್ಮಿಕೊಂಡಿದ್ದರು. ಪೋಷಕರನ್ನು ಒಳಗೊಂಡಂತಹ ಇವರ ತಂಡ ಸಮೂಹ ಹಂತದ ಎಲ್ಲ ಶಾಲೆಗಳಿಗೂ ತೆರಳಿ ಅದ್ಭುತವಾದ ಪ್ರದರ್ಶನ ನೀಡಿತು. ಹಾಗೂ ಕಲಿಕೆಯ ಹೊಸ ಸಾಧ್ಯತೆಗಳನ್ನು ಸಮೂಹ ಮಟ್ಟದ ಶಿಕ್ಷಕರಿಗೆ ಸಹ ಪರಿಚಯಿಸಿದ್ದಾರೆ. ಕಲೆಯ ಮೂಲಕ ಕಲಿಕೆ ಸರಳವಾಯಿತು. ಅಭಿನಯಿಸಿ ಆಸ್ವಾದಿಸಿ ಅಚ್ಚಳಿಯದೆ ಉಳಿಯಿತು.



ಕಲಾ ತರಬೇತಿಗಳು

**ರಾಧಿಕಾ ಭಾರದ್ವಾಜ್**
ಕಾರ್ಯಕ್ರಮ ಸಹಾಯಕ ನಿರ್ವಾಹಕರು,
ಕಲಾ ಶಿಕ್ಷಣ, ಐ.ಎಫ್.ಎ.
ಬೆಂಗಳೂರು



ಕಲಿ ಕಲಿಸು ಯೋಜನೆಯನ್ನು ಶಿಕ್ಷಣ ವಲಯಕ್ಕೆ ತಲುಪಿಸುವ ನಿಟ್ಟಿನಲ್ಲಿ ಶಿಕ್ಷಕರ ಕಾರ್ಯಗಾರಗಳನ್ನು ಮತ್ತು ತಾಲ್ಲೂಕು ಮಟ್ಟದ ಸಭೆ–ಚರ್ಚೆ ಹಾಗೂ ತರಬೇತಿಗಳನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯ ಅನುಮೋದನೆಯಲ್ಲಿ ಕಾಮಲಾಪುರ – ಕಲಬುರ್ಗಿ, ಕುಳಗಿ – ಧಾರವಾಡ ಮತ್ತು ಬಸವಕಲ್ಯಾಣ – ಬೀದರ್ ಚಿಕ್ಕಮಗಳೂರು, ತೀರ್ಥಹಳ್ಳಿ ಹಾಗೂ ಮಸ್ಕಿಯಲ್ಲಿ ದಾಖಲಾದವು.

ಕಲಾ ಅಂತರ್ಗತ ಕಲಿಕೆಯು ಏಕೆ? ಹೇಗೆ? ಮತ್ತು ಅದರ ಸಾಧ್ಯತೆಗಳೇನು ಅನ್ನುವ ಉದ್ದೇಶಗಳನ್ನು ಹೊಂದಿದ ಈ ಸನಿವಾಸ ಕಾರ್ಯಕ್ರಮಗಳು ಭಾಗವಹಿಸಿದ ಶಿಕ್ಷಕರ ಬೋಧನಾ ಕೌಶಲ್ಯಗಳಿಗೆ ಬದಲಾವಣೆಯ ಯೋಚನೆಗಳನ್ನು ಹುಟ್ಟುಹಾಕುವಲ್ಲಿ ಯಶಸ್ವಿಯಾಯಿತು. ಸಂಪನ್ಮೂಲ ವ್ಯಕ್ತಿಗಳಲ್ಲಿ ವಿವಿಧ ಕಲಾವಿದರು, ಶಿಕ್ಷಣ ತಜ್ಞರು, ಕಲಾ ಸಂಶೋಧಕರು, ಜಾನಪದ ತಜ್ಞರು, ರಂಗಕರ್ಮಿಗಳು ಹಾಗೂ ಶಿಕ್ಷಕರು ಆಗಮಿಸಿ ತಮ್ಮ ಕಾರ್ಯ ಕ್ಷೇತ್ರಗಳ ಸಾಧ್ಯತೆಗಳ ಮೂಲಕ ಶಿಬಿರಾರ್ಥಿಗಳಿಗೆ ಕಲಾ ಅಂತರ್ಗತ ಕಲಿಕಾ ಸಾಧ್ಯತೆಗಳ ಸಂಪೂರ್ಣ ಪರಿಚಯ ಮಾಡಿಕೊಟ್ಟರು ಎಂಬುದು ಹೆಮ್ಮೆಯ ವಿಷಯ. ಹೆಸರಿಸುವುದಾದರೆ ಜಾನಪದ ತಜ್ಞರುಗಳಾದ ಎಂ. ಬಸವಲಿಂಗಯ್ಯ ಹಿರೇಮಠ್, ವಿಶ್ವೇಶ್ವರಿ ಹಿರೇಮಠ್ ಧಾರವಾಡ, ಚಂದ್ರಪ್ಪ ಸೊಬಟಿ ಜಾನಪದ ವಿಶ್ವವಿದ್ಯಾಲಯ ಶಿಗ್ಗಾವಿ, ಮೋಹನ ಕುಮಾರ್ ಜಾನಪದ ವಿಶ್ವವಿದ್ಯಾಲಯ ಶಿಗ್ಗಾವಿ, ರಂಗ ಕಲಾವಿದರುಗಳಾದ ಅರುಣಾ ಬಿ. ಟಿ. ಚನ್ನಗಿರಿ, ಸಹನಾ ಪಿ. ಹೊಸಪೇಟೆ, ಚಿತ್ರ ಕಲಾವಿದರುಗಳಾದ ಚಿಕ್ಕಮಠ್ ಗದಗ, ಎಸ್.ಎಫ್. ಹುಸೇನಿ ಬೆಂಗಳೂರು, ಚನ್ನಕೇಶವ ಕಾಫಿ ಸಾಗರ, ದೇವರಾಜಪ್ಪ ಕಲಬುರ್ಗಿ, ಅಮರನಾಥ ಬೆಂಗಳೂರು, ಚಂದ್ರಶೇಖರ್ ಜಿ.ಟಿ.

ಬೆಂಗಳೂರು ಮುಂತಾದವರು ಕಾರ್ಯಗಾರಗಳನ್ನು ನಡೆಸಿಕೊಟ್ಟರು. ಹಾಗೆಯೇ ಶಿಕ್ಷಕ ಸಮುದಾಯದಿಂದ ಶೋಭಾ ಕೆ. ಮತ್ತು ತಂಡ ಸಾಗರ, ಡಾ. ಸತೀಶ್ ಕೆ.ಸಿ. ತೀರ್ಥಹಳ್ಳಿ, ಅಣ್ಣಪ್ಪ ಒಂಟಿಮಾಳಿಗಿ ಶಿವಮೊಗ್ಗ, ಸಿದ್ದಪ್ಪ ಬಿರಾದಾರ್ ಹಳಿಯಾಳ, ನಾಗರಾಜ ಹುಡೇದ ಯಲ್ಲಾಪುರ , ಗಂಗಾಧರ ನಾಯಕ್ ಸಿರ್ಸಿ, ಅಶೋಕ್ ತೋಟನಹಳ್ಳಿ ಸೇಡಂ, ಗುಂಡಪ್ಪ ಗೋಡಗಲ್ ಹುಮ್ನಾಬಾದ್, ರಾಜೀವ್ ಗೌಡ ಶಿಡ್ಲಘಟ್ಟ, ಗುರುರಾಜ್ ಎಲ್ ಗಜೇಂದ್ರಗಢ , ಶಾಂತಮಣಿ ಯಾದಗಿರಿ ಹಾಗೂ ಮನೋಜ್ ಪಾಲೇಕಾರ್ ಸಿರ್ಸಿ ಇವರುಗಳು ಜಾನಪದ, ನಾಟಕ, ಚಿತ್ರ ಕಲೆ, ಸಂಗೀತ, ಗೊಂಬೆ ಕಲೆ, ಪೇಪರ್ ಕಲೆ ಹೀಗೆ ವಿವಿಧ ಕಲಾ ಪ್ರಕಾರಗಳನ್ನು ತರಗತಿಯ ಬೋಧನಾವಧಿಯಲ್ಲಿ ಕಲಾ ಸಂಯೋಜಿತ ಪ್ರಯತ್ನಗಳನ್ನು ಹೇಗೆ ಬಳಸಬಹುದು ಎಂದು ಪರಿಚಯಿಸಿದರು. ಕುಪ್ಪಳಿಯ ಕಾರ್ಯಕ್ರಮದಲ್ಲಿ ಹಿರಿಯರಾದ ಕಡಿದಾಳು ಶಾಮಣ್ಣನವರ ಉಪಸ್ಥಿತಿ ಅದ್ಭುತ ಅನುಭವ.

ಈ ನಮ್ಮ ಪ್ರಯತ್ನಕ್ಕೆ ಅನುವು ಮಾಡಿಕೊಟ್ಟ ಧಾರವಾಡ ಮತ್ತು ಕಲಬುರ್ಗಿ ವಿಭಾಗದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಹಾಗೂ ಡಿ.ಎಸ್.ಈ.ಅರ್.ಟಿ.ಯ ಎಲ್ಲಾ ಅಧಿಕಾರಿಗಳಿಗೆ ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್ ಸಂಸ್ಥೆಯ ಪರವಾಗಿ ಆತ್ಮೀಯ ಧನ್ಯವಾದಗಳನ್ನು ಅರ್ಪಿಸುತ್ತೇನೆ.





ಕಲಬುರ್ಗಿ
ಹಾಗೂ
ಧಾರವಾಡ
ವಲಯವಾರು
ತರಬೇತಿಗಳು







| ಕಲಬುರ್ಗಿ ವಿಭಾಗ | |
|---|---|
| ಶಿಕ್ಷಕರ ಸಂಖ್ಯೆ | 38 |
| ವಿದ್ಯಾರ್ಥಿಗಳ ಸಂಖ್ಯೆ | 6956 |
| ಹಳ್ಳಿಗಳ ಸಂಖ್ಯೆ | 165 |



ಕಲಬುರ್ಗಿ ವಿಭಾಗ

| ಧಾರವಾಡ ವಿಭಾಗ | |
|---|---|
| ಶಿಕ್ಷಕರ ಸಂಖ್ಯೆ | 28 |
| ವಿದ್ಯಾರ್ಥಿಗಳ ಸಂಖ್ಯೆ | 10462 |
| ಹಳ್ಳಿಗಳ ಸಂಖ್ಯೆ | 175 |



ಧಾರವಾಡ ವಿಭಾಗ



ಕುಪ್ಪಳಿ
ಚಿಕ್ಕಮಗಳೂರು
ಹಾಗೂ
ಮಸ್ಕಿಯ
ಬ್ಲಾಕ್ ಮಟ್ಟದ
ತರಬೇತಿಗಳು











| ಧಾರವಾಡ ವಿಭಾಗ | |
|---|---|
| ಮುಖ್ಯಶಿಕ್ಷಕರು | 12 |
| ಬಿಆರ್‌ಪಿಗಳು | 03 |
| ಸಿಆರ್‌ಪಿಗಳು | 09 |
| ಶಿಕ್ಷಕರು | 86 |
| ಸಮುದಾಯ ಸದಸ್ಯರು | 30 |
| ಶಾಲೆಗಳು | 75 |



## ಸರ್ಕಾರಿ ಶಾಲೆಗಳ ಶಿಕ್ಷಕ/ಶಿಕ್ಷಕಿಯರಿಂದ ಯೋಜನಾ ಪ್ರಸ್ತಾವನೆಗಳನ್ನು ಆಹ್ವಾನಿಸಿದೆ

ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್ (ಐ.ಎಫ್.ಎ) ಕರ್ನಾಟಕದ ಸರ್ಕಾರಿ ಶಾಲೆಗಳಲ್ಲಿ ಕಲಾ ಶಿಕ್ಷಣ ನೀಡಲು ಶಾಲಾ ಶಿಕ್ಷಕ/ಶಿಕ್ಷಕಿಯರಿಂದ ಯೋಜನಾ ಪ್ರಸ್ತಾವನೆಗಳನ್ನು ಆಹ್ವಾನಿಸಿದೆ. ಇದು ಈಗಾಗಲೇ ಚಾಲ್ತಿಯಲ್ಲಿರುವ 'ಕಲಿ–ಕಲಿಸು' ಯೋಜನೆಯ ಮುಂದುವರಿಕೆ ಭಾಗವಾಗಿದೆ. ಶಿಕ್ಷಕರು, ಶಾಲಾ ಸಮುದಾಯ ಹಾಗೂ ಸ್ಥಳೀಯ ಕಲಾವಿದರ ಸಂಬಂಧವನ್ನು ಗಟ್ಟಿಗೊಳಿಸುವುದು ಈ ಯೋಜನೆಯ ಮುಖ್ಯ ಗುರಿ.

ಈ ಅನುದಾನದ ಮುಖ್ಯ ಉದ್ದೇಶವೆಂದರೆ ಶಿಕ್ಷಕರು ತಮ್ಮ ವಿಷಯದ ಪರಿಮಿತಿಯ ಚೌಕಟ್ಟನ್ನು ದಾಟಿ, ಕಲಾ ಪ್ರಕಾರಗಳನ್ನು ತಾವು ಕಲಿಸುತ್ತಿರುವ ವಿಷಯಗಳಲ್ಲಿ ಅಳವಡಿಸಿಕೊಳ್ಳುವುದು, ಈ ಮೂಲಕ ಎಲ್ಲಾ ವಿಷಯಗಳ ಪಠ್ಯಕ್ರಮದಲ್ಲಿ ಹಾಗೂ ತರಗತಿಯಲ್ಲಿ ಸ್ಥಳೀಯ ಕಲಾಪ್ರಕಾರಗಳನ್ನು ಅಳವಡಿಸಿಕೊಂಡು ಕಲಾವಿದರಿಗೆ ಹಾಗು ಶಿಕ್ಷಕರಿಗೆ ಹೊಸ ಕಲಿಕೆಯ ಅವಕಾಶವನ್ನು ಕಲ್ಪಿಸುವುದಾಗಿದೆ. ಅದರ ಜೊತೆಗೆ ಪರಿಸರ ಹಾಗೂ ಜಾನಪದ ಸಂಸ್ಕೃತಿಯನ್ನು ಶಾಲಾ ಶಿಕ್ಷಣದಲ್ಲಿ ಮತ್ತೆ ಪರಿಚಯ ಮಾಡುವ ಕೆಲಸ ಆಗಿದೆ.

ಅನುದಾನದ ಅವಧಿಯ ನಂತರವೂ ಯೋಜನಾಕಾರ್ಯಕ್ರಮವು ಮುಂದುವರೆಯಬಹುದಾದ ಎಲ್ಲಾ ಸಾಧ್ಯತೆಗಳನ್ನು ಸಂಸ್ಥೆ ನಿರೀಕ್ಷಿಸುತ್ತದೆ.

### ಈ ಯೋಜನಾ ಪ್ರಸ್ತಾವಕ್ಕೆ ಬೇಕಾದ ಅರ್ಹತೆ:

ಸರ್ಕಾರಿ ಶಾಲಾ ವಿಷಯ ಶಿಕ್ಷಕರು, ಕಲಾಶಿಕ್ಷಕರು, ಜಿಲ್ಲಾ ಶಿಕ್ಷಣ ತರಬೇತಿ ಕೇಂದ್ರದ (DIET) ಉಪನ್ಯಾಸಕರು.

### ಯೋಜನೆಯ ವ್ಯಾಪ್ತಿ:

ಯೋಜನೆಯ ವ್ಯಾಪ್ತಿಯಲ್ಲಿ ಕೆಳಕಂಡ ಯಾವುದಾದರೊಂದು ಅಂಶವಿರಬೇಕು.

* ಪೋಷಕರು, ವಿದ್ಯಾರ್ಥಿಗಳು, ಶಿಕ್ಷಕರು, ಕಲಾಸೇವೆಯಲ್ಲಿ ತೊಡಗಿರುವವರೂ ಒಳಗೊಂಡಂತೆ ಇನ್ನೂ ಹಲವು ಪಾಲುದಾರರನ್ನು ಕಲಾ ಯೋಜನೆಯ ಪರಿಧಿಯಲ್ಲಿ ತರಬೇಕು.
* ಬೋಧನೆಯಲ್ಲಿ ಸ್ಥಳೀಯ ಹಾಗೂ ಪ್ರಾಂತೀಯ ಕಲಾ ಪ್ರಕಾರಗಳನ್ನು ಬಳಸಿಕೊಳ್ಳುವ ಮೂಲಕ ಕಲಿಕೆಯನ್ನು ಶ್ರೀಮಂತಗೊಳಿಸುವುದು.
* ವಿದ್ಯಾರ್ಥಿಕೇಂದ್ರಿತ ಕಲಿಕೆಗೆ ಪ್ರೋತ್ಸಾಹಿಸುವುದು. ಉದಾಹರಣೆಗೆ ಕಲಾ ಪ್ರಕಾರಗಳನ್ನು ಪರಿಚಯಿಸಿ, ಮಕ್ಕಳು ವಿವಿಧ ಕಲಾ ಪ್ರಕಾರಗಳಲ್ಲಿ ನಿರಂತರವಾಗಿ ತೊಡಗುವಂತೆ ಪ್ರೋತ್ಸಾಹಿಸುವುದು. ಅವುಗಳ ಬಗ್ಗೆ ನಿತ್ಯ ಅನುಭಾವಿಸುವುದು ಹಾಗೂ ಹೆಚ್ಚೆಚ್ಚು ಅಭ್ಯಸಿಸುವ ಕೆಲಸ ಆಗುಮಾಡುವುದು (ರಂಗ, ಚಿತ್ರಕಲೆ, ಸಿನೆಮಾ, ಸಾಹಿತ್ಯ, ಫೋಟೋಗ್ರಫಿ, ಸಂಗೀತ ಇತ್ಯಾದಿ)
* ಈ ಯೋಜನೆಯು ಕಲಾ ಕಲಿಕೆಯ ಮೂಲಕ ಸಾಮಾಜಿಕ ನ್ಯಾಯ ಮತ್ತು ಪರಿಸರ ಸಂಬಂಧಿ ಅರಿವು ಮೂಡಿಸಲು ಶಾಲೆ ಸಮುದಾಯವನ್ನು ಪ್ರೇರೇಪಿಸುವಲ್ಲಿ ಸಹಕಾರಿಯಾಗಬೇಕು.

### ಯೋಜನಾ ಪ್ರಸ್ತಾವನೆ ಸಲ್ಲಿಸುವ ಪ್ರಕ್ರಿಯೆಯ ಮಾರ್ಗಸೂಚಿ:

* ಯೋಜನೆಯ ನಿರೀಕ್ಷಿತ ಕಾಲಾವಧಿ ಕನಿಷ್ಟ 09 ತಿಂಗಳದ್ದಾಗಿರಬೇಕು ಹಾಗು ಗರಿಷ್ಟ 18 ತಿಂಗಳ ಅವಧಿಯದ್ದಾಗಿರಬೇಕು.
* ನಿಮ್ಮ ಯೋಜನೆಯನ್ನು ಕನ್ನಡ, ಉರ್ದು, ಹಿಂದಿ ಹಾಗು ಇಂಗ್ಲೀಷ್ ಭಾಷೆಯಲ್ಲಿ ಬರೆಯಬಹುದು.
* ಕೊನೆಯ ದಿನಾಂಕದ ಮೊದಲು ನಿಮ್ಮ ಪ್ರಸ್ತಾವನೆಯು ಐ.ಎಫ್.ಎ.ಗೆ ತಲುಪಲು ನೀವೇ

ಜವಾಬ್ದಾರರಾಗಿರುತ್ತೀರಿ. ತಡವಾಗಿ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

* ನಿಮ್ಮ ಪ್ರಸ್ತಾವನೆ ಆಯ್ಕೆಯಾದಲ್ಲಿ ನಿಗಧಿಪಡಿಸಿದ ದಿನಾಂಕದಂದು ಖುದ್ದು ಚರ್ಚೆಗೆ ಬರಬೇಕು.
* ನಿಮ್ಮ ಯೋಜನೆಯು ಈ ಕೆಳಕಂಡ ವಿಷಯಗಳ ವಿವರಗಳನ್ನು ಒಳಗೊಂಡಿರಬೇಕು.
  * ಯೋಜನೆಯ ಉದ್ದೇಶಗಳು * ಕಾರ್ಯಯೋಜನೆಗಳ ವಿವರ
  * ಯೋಜನೆಯಿಂದ ಬರಬಹುದಾದ ಅಪೇಕ್ಷಿತ ಫಲಿತಾಂಶಗಳು * ಖರ್ಚು-ವೆಚ್ಚಗಳ ವಿವರ

**ಬಜೆಟ್:**

* ರೂ. 1,00,000/- ವರೆಗೆ ಧನಸಹಾಯ ದೊರೆಯುತ್ತದೆ.
* ಪ್ರತಿ ಬಜೆಟ್ ಯೋಜನೆಗೆ ಸಂಬಂಧಿಸಿದ ನಿರ್ದಿಷ್ಟ ಖರ್ಚು ವೆಚ್ಚಗಳ ವಿವರ ಹೊಂದಿರಬೇಕು.
* ಯೋಜನೆಗೆ ಸಂಬಂಧಿಸಿದ ವೈಯಕ್ತಿಕ ಖರ್ಚು, ಪ್ರಯಾಣ ಹಾಗೂ ಚಟುವಟಿಕೆಗಳ ವಿವರ ಹೊಂದಿರಬೇಕು. ಪ್ರಸ್ತಾವನೆಗೆ ಸಂಬಂಧಿಸಿದಂತೆ ಅಗತ್ಯವಿರುವ ನೂತನ ಉಪಕರಣಗಳನ್ನು ಮತ್ತು ವಸ್ತುಗಳನ್ನು ಕೊಳ್ಳಲು ಅವಕಾಶವಿರುತ್ತದೆ.
* ಸಾಂಸ್ಥಿಕ ಖರ್ಚು ವೆಚ್ಚಗಳು, ಕಟ್ಟಡದ ಖರ್ಚು ವೆಚ್ಚಗಳು ಮತ್ತು ಹೊಸ ಕಾಮಗಾರಿಗಳಿಗಾಗಿ ಅನುದಾನವಿರುವುದಿಲ್ಲ.
* ಲೆಕ್ಕಪರಿಶೋಧಕರಿಗಾಗಿ ನಿಗಧಿಪಡಿಸಿರುವ ರೂ. 2000/- ಹಣವನ್ನು ಯೋಜನೆಯ ಖರ್ಚು-ವೆಚ್ಚದಲ್ಲಿ ಸೂಚಿಸಿರಬೇಕು.

**ಅನುದಾನಕ್ಕೆ ಆಯ್ಕೆಯಾದ ಶಿಕ್ಷಕರಿಂದ ನಿರೀಕ್ಷೆಗಳೇನೆಂದರೆ:**

* ಮುಂದಿನ ದಿನಗಳಲ್ಲಿ ಅನುಷ್ಠಾನಕ್ಕೆ ತರಬಹುದಾದ ಒಂದು ನೂತನ ಪಠ್ಯಕ್ರಮದ ಅಭಿವೃದ್ಧಿಪಡಿಸುವಿಕೆ, ಅನುದಾನಕ್ಕೆ ಸಂಭಂದಿಸಿದ ಚಟುವಟಿಕೆಗಳು, ಎದುರಾದ ಸಮಸ್ಯೆಗಳು ಮತ್ತು ಕಲಿಕೆಗಳನ್ನು ದಾಖಲಿಸುವಿಕೆ
* ಯೋಜನೆಯು ಸರಿಯಾದ ಕ್ರಮದಲ್ಲಿ ನಡೆಯುತ್ತಿರುವುದನ್ನು ತೋರಿಸಲು ಕಾಲಕಾಲಕ್ಕೆ ಸರಿಯಾದ ದಾಖಲೆಗಳನ್ನು ಸಂಸ್ಥೆಗೆ ಒದಗಿಸಬೇಕು. (ದಾಖಲೆಗಳು ಛಾಯಾಚಿತ್ರ/ಆಡಿಯೋ/ವಿಡಿಯೋ/ವರದಿಯ ರೂಪದಲ್ಲಿರಬೇಕು)
* ಯೋಜನಾ ಅವಧಿಯಲ್ಲಿ ಮಧ್ಯಂತರ ವರದಿ ಹಾಗು ಯೋಜನೆಯ ಕೊನೆಯಲ್ಲಿ ಸಮಗ್ರ ವರದಿ.
* ಯೋಜನಾ ಅವಧಿಯ ನಂತರ ಹಣಕಾಸಿನ ವರದಿಯ ಜೊತೆ ಯೋಜನೆಯ ಸಂಪೂರ್ಣ/ಸವಿಸ್ತಾರ ವರದಿ.

ನಿಮ್ಮ ಪ್ರಸ್ತಾವನೆಗಳನ್ನು ಹಾಗೂ ಸಂದೇಹಗಳನ್ನು krishna@indiaifa.org / radhika@indiaifa.org ಗೆ ಕಳುಹಿಸಿಕೊಡಲು ಕೋರಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಕೆಳಗೆ ನೀಡಿರುವ ಕಲಿ-ಕಲಿಸು ಸಂಪರ್ಕಜಾಲಕ್ಕೆ ಭೇಟಿ ನೀಡಿ.

**http://www.indiaifa.org/programmes/arts-education.html**




ಇಂಡಿಯಾ ಫೌಂಡೇಶನ್ ಫ಼ಾರ್ ದಿ ಆರ್ಟ್ಸ್,
ಅಪೂರ್ವ, ನೆಲಮಹಡಿ
ನಂ. 259, 4ನೇ ಕ್ರಾಸ್,
ರಾಜ ಮಹಲ್ ವಿಲಾಸ್, 2ನೇ ಹಂತ,
2ನೇ ಬ್ಲಾಕ್,
ಬೆಂಗಳೂರು 5600094
ದೂರವಾಣಿ: 87629 54080 080–2341 4681/82